www.KannadaPrabha.in | ಮಂಗಳವಾರ 5.05.2026 | • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ | Kannada Prabha • Daily • Tuesday • 05.05.2026 • Volume 60 • Issue 124 • Pages 16 | • Price ₹7 | Bengaluru

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮೋದಿಯ ಮುಂದೆ ಮಂಕಾದ ದೀದಿ



ಮೊದಲ ಯತ್ನದಲ್ಲೇ ವಿಜಯದ ವಿಶಲ್

ಪಂಚರಾಜ್ಯಗಳ ಚುನಾವಣೆಯಲ್ಲಿ ಐತಿಹಾಸಿಕ ಫಲಿತಾಂಶ

ಬಿಜೆಪಿ ಪರ ಬಂಗಾಳ ಪರಿವರ್ತನೆ | ಹಳೆ ದ್ರಾವಿಡ ಪಕ್ಷಗಳ ತಿರಸ್ಕರಿಸಿ ತ.ನಾಡು ಪರಿವರ್ತನೆ

ಪೊರಿಬೊರ್ತನ್!

ಮೋದಿ-ಶಾ ಅಬ್ಬರ: ದೀದಿ ಧೂಳೀಪಟ | 206 ಸೀಟು ಗೆದ್ದು ಬಂಗಾಳದಲ್ಲಿ ಮೊದಲ ಸಲ ಬಿಜೆಪಿ ಸರ್ಕಾರ

ತ.ನಾಡಿಗೆ ವಿಜಯ್ ಜನನಾಯಕ | 60 ವರ್ಷದಲ್ಲೇ ಡಿಎಂಕೆ, ಅಣ್ಣಾಡಿಎಂಕೆ ಬಿಟ್ಟು ಮೂರನೆ ಪಕ್ಷಕ್ಕೆ ಗದ್ದುಗೆ

10 ವರ್ಷಗಳ ಬಳಿಕ ಕೇರಳ ಕೈವಶ | ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ | ಪುದುಚೇರಿಗೆ ಮತ್ತೊಮ್ಮೆ ರಂಗಸ್ವಾಮಿ

34 ವರ್ಷ ಬಂಗಾಳದಲ್ಲಿ ಅಧಿಕಾರದಲ್ಲಿದ್ದ ಎಡರಂಗವನ್ನು ಕಿತ್ತೊಗೆಯಲು 2011ರಲ್ಲಿ ಮಮತಾ ಬ್ಯಾನರ್ಜಿ ಬಂಗಾಳಿ ಭಾಷೆಯಲ್ಲಿ 'ಪೊರಿಬೊರ್ತನ್' (ಪರಿವರ್ತನೆ) ಎಂಬ ಘೋಷಣೆ ಮೊಳಗಿಸಿದ್ದರು. ಆ ವರ್ಷ ಬಂಗಾಳದಲ್ಲಿ ಪರಿವರ್ತನೆಯೇ ಆಗಿತ್ತು. 15 ವರ್ಷಗಳ ಬಳಿಕ ಬಂಗಾಳದಲ್ಲಿ ಮತ್ತೆ ಪರಿಬೊರ್ತನ್ ಆಗಿದೆ. ಫಲವಾಗಿ, ಬಿಜೆಪಿ ಮೊದಲ ಬಾರಿ ಅಧಿಕಾರಕ್ಕೇರಿದೆ. ಇತ್ತ ತ.ನಾಡಿನಲ್ಲೂ ಪೊರಿಬೊರ್ತನ್ ಆಗಿದೆ. ದೇಶವನ್ನೇ ವಿಜಯ್ ಅಚ್ಚರಿಗೆ ದೂಡಿದ್ದಾರೆ.

ತಮಿಳುನಾಡು — ಒಟ್ಟು ಸ್ಥಾನ: 234 | ಬಹುಮತಕ್ಕೆ: 118

ಪಕ್ಷ	2026	2021	ಲಾಭ/ನಷ್ಟ
ಟಿವಿಕೆ	107	----	+107
ಡಿಎಂಕೆ+	74	159	-85
ಎಡಿಎಂಕೆ+	52	75	-23
ಇತರರು	1	0	+1

ಪಶ್ಚಿಮ ಬಂಗಾಳ — ಒಟ್ಟು ಸ್ಥಾನ: 294 | ಬಹುಮತಕ್ಕೆ: 148

ಪಕ್ಷ	2026	2021	ಲಾಭ/ನಷ್ಟ
ಬಿಜೆಪಿ	206	77	+129
ಟಿಎಂಸಿ	81	214	-133
ಕಾಂಗ್ರೆಸ್	2	0	+2
ಇತರರು	4	2	+2

ಕೇರಳ — ಒಟ್ಟು ಸ್ಥಾನ: 140 | ಬಹುಮತಕ್ಕೆ: 71

ಪಕ್ಷ	2026	2021	ಲಾಭ/ನಷ್ಟ
ಯುಡಿಎಫ್	89	40	+49
ಎಲ್‌ಡಿಎಫ್	35	92	- 57
ಬಿಜೆಪಿ	03	0	+3
ಇತರರು	13	8	+5

ಅಸ್ಸಾಂ — ಒಟ್ಟು ಸ್ಥಾನ: 126 ಬಹುಮತಕ್ಕೆ: 64

ಪಕ್ಷ	2026	2021	ಲಾಭ/ನಷ್ಟ
ಬಿಜೆಪಿ	102	73	+29
ಕಾಂಗ್ರೆಸ್	21	31	- 10
ಎಐಯುಡಿಎಫ್	02	16	- 14
ಇತರರು	01	06	-5

ಪುದುಚೇರಿ — ಒಟ್ಟು ಸ್ಥಾನ: 30 ಬಹುಮತಕ್ಕೆ: 16


ಪಕ್ಷ	2026	2021	ಲಾಭ/ನಷ್ಟ
ಎಐಎನ್‌ಆರ್‌ಸಿ	18	16	+2
ಡಿಎಂಕೆ+	06	08	- 2
ಟಿವಿಕೆ	04	00	+ 4
ಇತರರು	03	06	-3

ದೇಶದಲ್ಲಿ ಎಲ್ಲೂ ಇಲ್ಲ ಎಡರಂಗ ಸರ್ಕಾರ

ಕೇರಳದಲ್ಲಿ ಎಡರಂಗದ ಸೋಲಿನೊಂದಿಗೆ ಯಾವುದೇ ರಾಜ್ಯದಲ್ಲಿ ಎಡಪಕ್ಷಗಳ ಸರ್ಕಾರ ಅಸ್ತಿತ್ವದಲ್ಲಿ ಇಲ್ಲದಂತಾಗಿದೆ. ಈ ರೀತಿ ಆಗಿದ್ದು 50 ವರ್ಷದಲ್ಲೇ ಮೊದಲು. 1977ರಿಂದ ದೇಶದ ಎಲ್ಲಾದರೂ 1 ಕಡೆ ಎಡರಂಗ ಸರ್ಕಾರ ಇರುತ್ತಿತ್ತು.

KAS, PSI, PDO, PC ಪರೀಕ್ಷೆಗಳಿಗೆ ಆನ್ ಲೈನ್ ಮೂಲಕ ಉಚಿತ ತರಬೇತಿ

ಹಿಂದು ಕಲಿಗಳ ತವರಲ್ಲಿ ಹಿಂದು ಪಕ್ಷ ಅಧಿಕಾರಕ್ಕೆ

ಹಿಂದು ಧರ್ಮ ಪ್ರಚಾರಕ ಸ್ವಾಮಿ ವಿವೇಕಾನಂದರು ಹಾಗೂ ಬಿಜೆಪಿಯ ಪೂರ್ವಾಶ್ರಮ ಜನಸಂಘದ ಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿ ಅವರ ತವರು ಬಂಗಾಳ. ದೇಶದ ಉದ್ದಗಲಕ್ಕೂ ಗೆಲುವಿನ ಪತಾಕೆ ಹಾರಿಸಿದ ಬಿಜೆಪಿಯು ಹಿಂದು ಪಕ್ಷ ಎನಿಸಿಕೊಂಡಿದ್ದರೂ ಬಂಗಾಳ ಪ್ರವೇಶ ಕಷ್ಟವಾಗಿತ್ತು. ಈಗ ಅಲ್ಲೂ ಗೆಲ್ಲುವ ಮೂಲಕ ಹಿಂದು ಕಲಿಗಳ ತವರಲ್ಲಿ ಚುಕ್ಕಾಣಿಗೇರಿದಂತಾಗಿದೆ.

ಪ.ಬಂಗಾಳ ಗೆಲುವಿಂದ ಬಾಂಗ್ಲಾದೇಶಕ್ಕೆ ನಡುಕ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿರುವುದು ಆ ರಾಜ್ಯದ ಜತೆ ಗಡಿ ಹಂಚಿಕೊಂಡಿರುವ ಬಾಂಗ್ಲಾದೇಶಕ್ಕೆ ನಡುಕ ಹುಟ್ಟಿಸಿದೆ. ಬಾಂಗ್ಲಾ ಅಕ್ರಮ ವಲಸಿಗ ವಿಚಾರವನ್ನೇ ಮುಂದಿಟ್ಟು ಕೊಂಡು ಬಿಜೆಪಿ ಚುನಾವಣೆ ಎದುರಿಸಿತ್ತು. ಹೀಗಾಗಿ ಬಂಗಾಳದಿಂದ ಬಾಂಗ್ಲಾಕ್ಕೆ ಸಾಮೂಹಿಕ ವಲಸೆ ಆರಂಭವಾಗ ಬಹುದು, ಅದನ್ನು ನಿರ್ವಹಿಸು ವುದು ಹೇಗೆಂಬ ಚಿಂತೆ ಬಾಂಗ್ಲಾದೇಶದ್ದು.

ಮೋದಿ- ಅಮಿತ್ ಶಾ ಎಲೆಕ್ಷನ್ ಜೋಡೆತ್ತು



2014ರ ನಂತರ ಬಿಜೆಪಿಯದ್ದು ಸುವರ್ಣ ಯುಗ. ಮೋದಿ- ಅಮಿತ್ ಶಾ ಜೋಡಿ ಬಿಜೆಪಿ ಎಂದಿಗೂ ಗೆಲ್ಲದ ರಾಜ್ಯಗಳ ಲ್ಲೆಲ್ಲಾ ಏಕಾಂಗಿಯಾಗಿ ಪಕ್ಷವನ್ನು ಅಧಿಕಾರಕ್ಕೆ ತಂದಿದೆ. ಅಧಿಕಾರದಲ್ಲಿರುವ ರಾಜ್ಯಗಳನ್ನೂ ಉಳಿಸಿಕೊಂಡು ಹೋಗುತ್ತಿದೆ. ಅಮೆರಿಕ ಚುನಾವಣೆಯಲ್ಲೂ ಮೋದಿ ಹೆಸರು ಪ್ರಸ್ತಾಪವಾಗುವಂತಾಗಿದೆ. ಹೀಗಾಗಿ ಈ ಜೋಡಿ ಎಲೆಕ್ಷನ್‌ಗಳನ್ನು ಗೆಲ್ಲುವ ಜೋಡೆತ್ತಿನಂತಾಗಿದೆ!

ವಿಜಯ್ ಕಾರು ಚಾಲಕನ ಮಗನೂ ಈಗ ಎಂಎಲ್‌ಎ!

ಆಟೋ ಚಾಲಕನೂ ಈಗ ಶಾಸಕ

ವಿಜಯ್ ಅವರ ಕಾರು ಚಾಲಕ ರಾಜೇಂದ್ರನ್ ಪುತ್ರ ಶಬರಿನಾಥನ್ (30) ಟಿವಿಕೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. 3 ದಶಕದಿಂದ ತಮ್ಮ ಬಳಿ ರಾಜೇಂದ್ರನ್ ಚಾಲಕ ಆಗಿರುವ ಹಿನ್ನೆಲೆಯಲ್ಲಿ ಅವರ ಪುತ್ರಗೆ ವಿಜಯ್ ಟಿಕೆಟ್ ಕೊಟ್ಟಿದ್ದರು. ಇನ್ನು ವಿಜಯ್ ಪಕ್ಷದಿಂದ ಸ್ಪರ್ಧಿಸಿದ್ದ ಆಟೋ ಚಾಲಕನೊಬ್ಬ 14 ಸಾವಿರ ಮತಗಳಿಂದ ಗೆದ್ದಿದ್ದಾನೆ.


ವಿಜಯ್ ಗೆಲುವಿನ ಹಿಂದೆ ಸಿದ್ದು ಮಾಜಿ ಸಲಹೆಗಾರ! ↘ 10

ಎಡ, ದೀದಿ ಬಳಿಕ ಈಗ ಬಲಪಂಥಕ್ಕೆ ಬಂಗಾಳ

34 ವರ್ಷದಿಂದ ಅಧಿಕಾರ ದಲ್ಲಿದ್ದ ಎಡರಂಗವನ್ನು ಕಿತ್ತೊಗೆಯಲು ಮಮತಾ ಬ್ಯಾನರ್ಜಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಮಮತಾರನ್ನು ಕೂಡ ಅಷ್ಟೇ ಶ್ರಮ ಹಾಕಿ ಈಗ ಬಿಜೆಪಿ ಕೆಳಗಿಳಿಸಿದೆ. ಈ ರೂಪಾಂತರ ದಿಂದಾಗಿ, ಎಡಪಂಥವನ್ನು ಬೆಂಬಲಿಸುತ್ತಿದ್ದ ಬಂಗಾಳ, ಮಮತಾ ಸಿದ್ಧಾಂತಕ್ಕೆ ವಾಲಿತ್ತು. ಈಗ ಬಲಪಂಥೀಯ ಸಿದ್ಧಾಂತಕ್ಕೆ ಆಕರ್ಷಿತವಾಗಿದೆ.

ಗಂಗಾ ನದಿಯ ಮಡಿಲು ಈಗ ಬಿಜೆಪಿಯ ತೊಟ್ಟಿಲು

ಗಂಗೋತ್ರಿ–ಗಂಗಾಸಾಗರ ಕೇಸರಿ



ಪಶ್ಚಿಮ ಬಂಗಾಳವನ್ನೂ ಬಿಜೆಪಿ ಗೆಲ್ಲುವುದರೊಂದಿಗೆ ಜಾರ್ಖಂಡ್ ಬಿಟ್ಟು ಗಂಗಾ ನದಿ ಹರಿಯುವ ಎಲ್ಲ ರಾಜ್ಯಗಳೂ ಕೇಸರಿ ಪಕ್ಷದ ವಶವಾದಂತಾಗಿದೆ. ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳದಲ್ಲಿ ಗಂಗಾ ನದಿ ಹರಿಯುತ್ತದೆ.

ರಜನಿ, ಕಮಲ್ ಕೈಯಲ್ಲಿ ಆಗದ್ದನ್ನು ಸಾಧಿಸಿದ ವಿಜಿಲ್



ತಮಿಳುನಾಡು ಹೇಳಿಕೇಳಿ ಅಗಾಧ ಸಿನಿಮಾ ಪ್ರಭಾವ ಹೊಂದಿರುವ ರಾಜ್ಯ. ಎಂ.ಜಿ.ಆರ್. ಅವರು ತಮ್ಮ ಸಿನಿಮಾ ಪ್ರಭಾವದಿಂದಲೇ ಡಿಎಂಕೆಯಂತಹ ದೈತ್ಯ ಪಕ್ಷವನ್ನು ಮಣಿಸಿ 10 ವರ್ಷ ಮುಖ್ಯಮಂತ್ರಿಯಾದವರು. ಇದೀಗ ಅಲ್ಲಿ ವಿಜಯ್ ರೂಪದಲ್ಲಿ ಮತ್ತೊಂದು ಪರ್ಯಾಯ ಸಿಕ್ಕಿದೆ. ರಜನೀಕಾಂತ್, ಕಮಲಹಾಸನ್, ವಿಜಯಕಾಂತ್ ಅವರ ಕೈಯಲ್ಲಿ ಆಗದ್ದನ್ನು ಅವರೀಗ ಮಾಡಿ ತೋರಿಸಿದ್ದಾರೆ.

ಕೇರಳದಲ್ಲಿ ಬಿಜೆಪಿಗೆ ಐತಿಹಾಸಿಕ 3 ಸೀಟು

ರಾಜೀವ್ ಚಂದ್ರಶೇಖರ್ ಸಾಧನೆ



ಕೇರಳದಲ್ಲಿ ಬಿಜೆಪಿ ಈ ಬಾರಿ 3 ಸ್ಥಾನ ಗೆದ್ದು ಇತಿಹಾಸ ಸೃಷ್ಟಿಸಿದೆ. ರಾಜ್ಯದಲ್ಲಿ ಬಿಜೆಪಿ ಖಾತೆ ತೆರೆದಿದ್ದೇ 2016ರಲ್ಲಿ. ಆಗ 1 ಸ್ಥಾನ ಗೆದ್ದಿತ್ತು. 2021ರಲ್ಲಿ ಶೂನ್ಯ ಸಂಪಾದಿಸಿತ್ತು. ಇದೀಗ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದಲ್ಲಿ ಅವರು ಸೇರಿ ಮೂವರು ಗೆದ್ದಿದ್ದಾರೆ. ತನ್ಮೂಲಕ ಭವಿಷ್ಯದಲ್ಲಿ ಬಂಗಾಳ ರೀತಿ ಕೇರಳದಲ್ಲೂ ಫಲಿತಾಂಶ ತರುವ ಸುಳಿವು ಕೊಟ್ಟಿದ್ದಾರೆ.

ವಿಜಯದ ಹಿಂದಿದೆ 17 ವರ್ಷದ ರಹಸ್ಯ!

ತಮಿಳುನಾಡಿನಲ್ಲಿ ವಿಜಯ್ ಸಾಧಿಸಿದ ಗೆಲುವು ಏಕಾಏಕಿ ಸಿಕ್ಕಿದ್ದಲ್ಲ. 17 ವರ್ಷಗಳಿಂದ ಹಾಕಿದ ಶ್ರಮಕ್ಕೆ ಫಲ ಸಿಕ್ಕಿದೆ. ವಿಜಯ್ ಅವರು 2009 ರಿಂದಲೇ ಆರಂಭಿಸಿದ ಚಟುವಟಿಕೆ ಈಗ ಅವರನ್ನು ಸಿಎಂ ಸ್ಥಾನಕ್ಕೆ ತಂದು ನಿಲ್ಲಿಸಿದೆ. ವಿವರ ↘ 7

2 ಸಿಎಂಗಳ ಸೋಲು

ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ, ತಮಿಳುನಾಡಿನ ಸಿಎಂ ಎಂ.ಕೆ.ಸ್ಟಾಲಿನ್ ಅವರು ಸ್ವಕ್ಷೇತ್ರಗಳಲ್ಲೇ ಹೀನಾಯವಾಗಿ ಸೋತಿದ್ದಾರೆ.

ವಿಜಿ ಜತೆ ಹೋಗೋಣ ಎಂದಿದ್ದ ರಾಗಾ, ಬೇಡ ಎಂದಿದ್ದ ಖರ್ಗೆ, ಚಿದು!

ವಿಧಾನಸಭೆ ಚುನಾವಣೆಗೂ ಮುನ್ನ ನಟ ವಿಜಯ್ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳಲು ರಾಹುಲ್ ಬಯಸಿದ್ದರು. ಆದರೆ ಹಳೆಯ ಮಿತ್ರನಾಗಿರುವ ಡಿಎಂಕೆ ಜತೆಯೇ ಇರೋಣ ಎಂದು ಖರ್ಗೆ ಹಾಗೂ ಚಿದಂಬರಂ ಹೇಳಿದ್ದರು. ಅದು ಈಗ ಮುಳುವಾಗಿದೆ.

ವಿಶೇಷ ಪುಟಗಳು 7, 8, 9, 10

ಉಪಸಮರ | ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ, ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದಿದ್ದ ಉಪಚುನಾವಣೆ ಫಲಿತಾಂಶ ಪ್ರಕಟ | ಆಡಳಿತಾರೂಢ ಪಕ್ಷಕ್ಕೆ ಗೆಲುವು

ದಾವಣಗೆರೆ, ಬಾಗಲಕೋಟೆ ಎರಡೂ ಕ್ಷೇತ್ರದಲ್ಲಿ ಕಾಂಗ್ರೆಸ್ ಜಯಭೇರಿ

ಮುಸ್ಲಿಂ ಒಳ ಹೊಡೆತವಿದ್ದರೂ ಶಾಮನೂರು ಮೊಮ್ಮಗ ಜಯ

ಬಿಜೆಪಿಯ ವಿರುದ್ಧ ಸಮರ್ಥ್‌ಗೆ 5708 ಮತದ ಗೆಲುವು

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಮರ್ಥ ಎಂ.ಶಾಮನೂರು, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಶ್ರೀನಿವಾಸ ಟಿ.ದಾಸಕರಿಯಪ್ಪ ವಿರುದ್ಧ 5708 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದಾರೆ.

ಸಮರ್ಥ 69578 ಮತ ಪಡೆದರೆ, ಬಿಜೆಪಿಯ ದಾಸಕರಿಯಪ್ಪ 63,870 ಮತಗಳನ್ನು ಪಡೆದರು. ಉಳಿದಂತೆ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್‌ಕೊಡ್ಲಿಪೇಟೆ 18,975 ಮತ ಪಡೆದು, ತೃತೀಯ ಸ್ಥಾನ ಪಡೆದಿದ್ದಾರೆ. ↘ 16




ಸಮರ್ಥ್ ಶಾಮನೂರು	ಶ್ರೀನಿವಾಸ ದಾಸಕರಿಯಪ್ಪ
69578	63870
ಗೆಲುವು	ಸೋಲು

ನಿರೀಕ್ಷೆಯಂತೆಯೇ ಕಾಂಗ್ರೆಸ್‌ನ ಮೇಟಿ ಪುತ್ರಗೆ ಸುಲಭ ಜಯ

ಉಮೇಶ್ ಮೇಟಿಗೆ 22332 ಮತಗಳಿಂದ ವಿಜಯ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಡಾ. ವೀರಣ್ಣ ಚರಂತಿಮಠ ವಿರುದ್ಧ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಉಮೇಶ ಮೇಟಿ 98,919 ಮತ ಪಡೆದು ಗೆಲುವು ಸಾಧಿಸಿದರೆ, ಬಿಜೆಪಿಯ ವೀರಣ್ಣ ಚರಂತಿಮಠ 76,587 ಮತ ಪಡೆದು ಪರಾಜಯ ಹೊಂದಿದ್ದಾರೆ. ↘ 16




ಉಮೇಶ ಮೇಟಿ	ವೀರಣ್ಣ ಚರಂತಿಮಠ
98919	76587
ಗೆಲುವು	ಸೋಲು

2 ಕ್ಷೇತ್ರದಲ್ಲಿ ಗೆದ್ದರೂ ಕೈಗೆ ಎಚ್ಚರಿಕೆ ಕರೆಗಂಟೆ!

- ಆಡಳಿತ ವಿರೋಧಿ ಅಲೆ ಇಲ್ಲ ಎಂಬ ಸಂದೇಶ ರವಾನಿಸುವಲ್ಲಿ 2 ಕ್ಷೇತ್ರಗಳ ಗೆಲುವು ಯಶಸ್ವಿ
- ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿವೆ, ನೆರವಾಗಿವೆ ಎಂದು ಪಕ್ಷಕ್ಕೆ ವಿಶ್ವಾಸ
- ಆದರೆ ಅನುಕಂಪದ ಅಲೆ, ಸರ್ಕಾರದ ಬಲ ಇದ್ದರೂ ದಾವಣಗೆರೆಯಲ್ಲಿ ಮತ ಇಳಿಕೆ
- ದಾವಣಗೆರೇಲಿ ಅಂತರ ಇಳಿಕೆ, ಅಲ್ಪಸಂಖ್ಯಾತರ ಮತ ಚದುರಿದ್ದು ಪಕ್ಷಕ್ಕೆ ಕಳವಳಕಾರಿ
- ಇದರಿಂದ ಪಕ್ಷದ ನಾಯಕತ್ವಕ್ಕೆ ಆತ್ಮವಿಮರ್ಶೆ ಮಾಡಬೇಕಾದ ಸಂದೇಶ ರವಾನೆ
- ಆದರೆ ಫಲಿತಾಂಶ ರಾಜಕೀಯ ಬೆಳವಣಿಗೆಗೆ ಮುನ್ನುಡಿ ಬರೆಯುವಷ್ಟು ಪ್ರಭಾವ ಹೊಂದಿಲ್ಲ

ಬಿಕ್ಕಟ್ಟು ಇತ್ಯರ್ಥ ಆದ್ರೂ ಬಿಜೆಪಿಗೆ ಗೆಲುವು ಸಿಗ್ಲಿಲ್ಲ

- 2 ಕ್ಷೇತ್ರಗಳ ಪೈಕಿ ಬಾಗಲಕೋಟೆಗಿಂತ ದಾವಣಗೆರೆ ಗೆಲ್ಲುವ ಸಾಧ್ಯತೆ ಬಗ್ಗೆ ಬಿಜೆಪಿಗೆ ವಿಶ್ವಾಸ
- ಕಾಂಗ್ರೆಸ್‌ನ ಆಂತರಿಕ ಬಿಕ್ಕಟ್ಟು ಪಕ್ಷಕ್ಕೆ ನೆರವಾಗಬಹುದೆಂಬುದು ಬಿಜೆಪಿಗರ ಲೆಕ್ಕಾಚಾರವಾಗಿತ್ತು
- ಹೀಗಾಗಿ ಭಿನ್ನಾಭಿಪ್ರಾಯ ಮರೆತು ಎರಡು ಕಡೆ ಪಕ್ಷದ ನಾಯಕರು ಒಟ್ಟಾಗಿ ಕೆಲಸ ಮಾಡಿದ್ದರು
- ಆದರೆ ನಾಯಕರ ಶ್ರಮ ಕಾಂಗ್ರೆಸ್‌ಗೆ ಸುಲಭ ಗೆಲುವು ತಪ್ಪಿಸಿತು. ಪಕ್ಷಕ್ಕೆ ಗೆಲುವು ತರಲಿಲ್ಲ
- ಈ ಹಿಂದಿನ ಸುರಪುರ, ಶಿಗ್ಗಾವಿ, ಸಂಡೂರು ಉಪಚುನಾವಣೆಯಲ್ಲೂ ಬಿಜೆಪಿಗೆ ಜಯವಿಲ್ಲ
- ಚನ್ನಪಟ್ಟಣದಲ್ಲಿ ಮಿತ್ರ ಪಕ್ಷ ಜೆಡಿಎಸ್ ಕಣಕ್ಕೆ ಇಳಿಸಿದ್ದರೂ ಅಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು

ಕನ್ನಡಪ್ರಭ
ಮಂಗಳವಾರ 5.05.2026

ಗರಿಷ್ಠ 35°c | ಕನಿಷ್ಠ 23°c

ನಗರದಲ್ಲಿ ಇಂದು **ಪೆಟ್ರೋಲ್-ಡೀಸೆಲ್** ದರ

ಪೆಟ್ರೋಲ್	ಡೀಸೆಲ್
102.92	90.99

ಕಬ್ಬನ್ ಪಾರ್ಕ್‌ನಲ್ಲಿ 8ರಿಂದ ಮಾವು ಮೇಳ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಕಬ್ಬನ್ ಉದ್ಯಾನದಲ್ಲಿ ಇದೇ ಮೊದಲ ಬಾರಿಗೆ ಮೇ 8 ಅಥವಾ 9 ರಿಂದ 17ರವರೆಗೆ ಮಾವು-ಹಲಸು ಮೇಳ ಆಯೋಜಿಸಲು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಸಿದ್ಧತೆ ನಡೆಸಿದೆ.

ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಹತ್ತು ದಿನಗಳು ನಡೆಯಲಿರುವ ಮಾವು- ಹಲಸು ಮೇಳದಲ್ಲಿ ರಾಮನಗರ, ತುಮಕೂರು ಮತ್ತು ಮಂಡ್ಯ ಜಿಲ್ಲೆಯ ಮಾವು ಬೆಳೆಗಾರರು ಭಾಗವಹಿಸಲಿದ್ದು, ಮಾವು ಪ್ರಿಯರು ಅತ್ಯುತ್ತಮ ಗುಣಮಟ್ಟದ ಮಾವು ಖರೀದಿಸಿ ಸವಿಯಬಹುದಾಗಿದೆ.

ಮಾವು ಹಂಗಾಮಿನಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ರಾಮನಗರ, ಮಂಡ್ಯ, ತುಮಕೂರು ಜಿಲ್ಲೆಗಳಲ್ಲಿ ಬೇಗನೇ ಮಾವು ಫಸಲು ಕೊಯ್ಲಿಗೆ ಬಂದಿದೆ. ಇಲ್ಲಿನ ಮಾವು ಬೆಳಗಾರ ರೈತರಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಉದ್ದೇಶ ಮತ್ತು ಬೆಂಗಳೂರಿನ ನಾಗರಿಕರಿಗೆ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಯೋಗ್ಯ ಬೆಲೆಗೆ ಒದಗಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಈ ಮಾವು ಮೇಳವನ್ನು ಆಯೋಜಿಸಿದೆ.

ಮಾವು ಬೆಳೆಗಾರರು ಗ್ರಾಹಕರನ್ನು ಸೆಳೆಯಲು ಶೇ.5ರಿಂದ 10ರಷ್ಟು ಅಥವಾ ಅದಕ್ಕಿಂತ ಅಧಿಕ ರಿಯಾಯಿತಿ ಕೊಡುವ ಸಾಧ್ಯತೆಯೂ ಇದೆ. ಕಬ್ಬನ್ ಉದ್ಯಾನದಲ್ಲಿ ಮಾವು ಮೇಳಕ್ಕೆಂದು ಮಾವು ಅಭಿವೃದ್ಧಿ ನಿಗಮ ಸುಮಾರು 70 ಮಳಿಗೆ ಹಂಚಲಾಗಿದೆ. ಈ ಪೈಕಿ ಬೆಳೆಗಾರರಿಗೆ 60 ಮಳಿಗೆಗಳು ಉಳಿದವು ಇತರೆ ತಿಂಡಿ, ಆಟಿಕೆ, ವಸ್ತುಗಳ ಮಳಿಗೆಗಳು ಇರಲಿವೆ.



ಒಡಿಶಾದ ಭುವನೇಶ್ವರದಲ್ಲಿ ನಡೆದ 61ನೇ 'ಫೆಮಿನಾ ಮಿಸ್ ಇಂಡಿಯಾ -2026' ಕಿರೀಟ ಮುಡಿಗೇರಿಸಿಕೊಂಡಿರುವ ಕಾರವಾರದ ಕಾಂಗ್ರೆಸ್ ಶಾಸಕರಾದ ಸತೀಶ್ ಸೈಲ್ ಅವರ ಪುತ್ರಿ ಸಾಧ್ವಿ ಸತೀಶ್ ಸೈಲ್ ಅವರನ್ನು ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು. ಶಾಸಕ ಸತೀಶ್ ಸೈಲ್, ಮೇಲ್ಮನೆ ಮುಖ್ಯ ಸಚೇತಕ ಸಲೀಂ ಅಹ್ಮದ್, ಸದಸ್ಯ ಐವಾನ್ ಡಿಸೋಜಾ ಹಾಜರಿದ್ದರು.

ಮಿಸ್ ಇಂಡಿಯಾ ಸಾಧ್ವಿಗೆ ಸಿಎಂ ಸಿದ್ದು ಅಭಿನಂದನೆ

ಕೆ.ಸಿ.ರೆಡ್ಡಿ ಸಮರ್ಥ ಆಡಳಿತಗಾರ: ಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಾಜಿ ಮುಖ್ಯಮಂತ್ರಿ ದಿವಂಗತ ಕೆ.ಸಿ ರೆಡ್ಡಿಯವರು ಒಬ್ಬ ಸಮರ್ಥ ಆಡಳಿತಗಾರರಾಗಿದ್ದು ಸಾರ್ವಜನಿಕ ಜೀವನದಲ್ಲಿ ಅತ್ಯಂತ ಪ್ರಾಮಾಣಿಕತೆಯಿಂದ ನಡೆದುಕೊಂಡವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು.

ಮಂಗಳವಾರ ಕೆ.ಸಿ.ರೆಡ್ಡಿ ಯವರ ಜನ್ಮ ದಿನದ ಅಂಗವಾಗಿ ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾಧ್ಯಮದವರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ಕೆ.ಸಿ.ರೆಡ್ಡಿಯವರು ಸ್ವಾತಂತ್ರ್ಯದ ನಂತರ ಮೊದಲ ಮುಖ್ಯಮಂತ್ರಿಯಾದವರು. ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗಿಯಾಗಿದ್ದರು. ಕೋಲಾರ ಮೂಲದವರಾದ ಅವರು ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದವರು. ಕಾಂಗ್ರೆಸ್ ಪಕ್ಷ ಸದೃಢವಾಗಿರಲು ಅವರೂ ಕೂಡ ಕಾರಣಕರ್ತರು ಎಂದರು. ಐಟಿಐ, ಎಚ್‌ಎಂಟಿ, ಇಸ್ರೋ ಮುಂತಾದ ಸಂಸ್ಥೆಗಳು ರಾಜ್ಯದಲ್ಲಿ ಸ್ಥಾಪನೆಯಾಗಿದ್ದರೆ ಅದಕ್ಕೆ ಮೂಲ ಕಾರಣ ಕೆ.ಸಿ.ರೆಡ್ಡಿ ಅವರು. ಅವರ ಆಡಳಿತದ ಹೆಜ್ಜೆಗಳು ನಮಗೆ ದಾರಿದೀಪ ಎಂದು ಹೇಳಿದರು.

ಸುದ್ದಿ ಸಿಂಚನ

ವೇಶ್ಯಾವಾಟಿಕೆ ಅಡ್ಡೆ ಮೇಲೆ ಸಿಸಿಬಿ ದಾಳಿ: ನಾಲ್ವರ ಬಂಧನ, ಸ್ತ್ರೀಯರ ರಕ್ಷಣೆ

ಬೆಂಗಳೂರು: ನಗರದ ವಿವಿಧೆಡೆ ವೇಶ್ಯಾವಾಟಿಕೆ ಮೇಲೆ ನಡೆಸಿ ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರನ್ನು ಪ್ರತ್ಯೇಕವಾಗಿ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಜಾಲಹಳ್ಳಿ, ಸುಬ್ರಹ್ಮಣ್ಯಪುರ ಹಾಗೂ ಜ್ಞಾನಭಾರತಿ ಠಾಣಾ ವ್ಯಾಪ್ತಿಯಲ್ಲಿ ಈ ದಾಳಿ ನಡೆದಿದ್ದು, ಮನೆಗಳನ್ನು ಬಾಡಿಗೆ ಪಡೆದು ಆರೋಪಿಗಳು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಪಡೆದು ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಕಾರ್ಯಾಚರಣೆ ನಡೆಸಿದೆ. ಈ ವೇಳೆ ನಾಲ್ವರು ಮಹಿಳೆಯರನ್ನು ಸಹ ಸಿಸಿಬಿ ಪೊಲೀಸರು ರಕ್ಷಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆ ಸಂಚಾರ ನಿಯಮ ಉಲ್ಲಂಘನೆ: 752 ಕೇಸ್ ದಾಖಲು, ₹1 ಲಕ್ಷ ದಂಡ

ಬೆಂಗಳೂರು: ಪಾನಮತ್ತ ಹಾಗೂ ಅತಿವೇಗ ಚಾಲನೆ ಮಾಡಿ ಸಂಚಾರ ನಿಯಮ ಉಲ್ಲಂಘಿಸಿದವರಿಗೆ ಸಂಚಾರ ವಿಭಾಗದ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ.



ನಗರ ವ್ಯಾಪ್ತಿ ಒಂದು ವಾರದ ಅವಧಿಯಲ್ಲಿ ಪಾನಮತ್ತ ಹಾಗೂ ಅತಿವೇಗ ಚಾಲನೆ ಸಂಬಂಧ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸು, ಈ ವೇಳೆ 752 ಪ್ರಕರಣಗಳನ್ನು ದಾಖಲಿಸಿ 1.19 ಲಕ್ಷ ರು. ದಂಡವನ್ನು ಸಂಗ್ರಹಿಸಿದ್ದಾರೆ. ಈ ಪೈಕಿ ಪಾನಮತ್ತ ಚಾಲನೆ ಸಂಬಂಧ 46,103 ವಾಹನಗಳ ಪರಿಶೀಲಿಸಿ 633 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅದೇ ರೀತಿ ಅತಿವೇಗದ ಚಾಲನೆ ಕುರಿತು 119 ಪ್ರಕರಣ ವರದಿ ಮಾಡಿ ದಂಡ ವಿಧಿಸಿದ್ದಾರೆ.

ರಾಜಕಾಲುವೆ ತಡೆಗೋಡೆಗೆ ಡಿಕ್ಕಿ ಹೊಡೆದು ಕಾರು ಜಖಂ

ಬೆಂಗಳೂರು: ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ರಾಜಕಾಲುವೆಗೆ ಡಿಕ್ಕಿಯಾಗಿ ಜಖಂಗೊಂಡಿರುವ ಘಟನೆ ಶೇಷಾದ್ರಿಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಶೇಷಾದ್ರಿಪುರ ಮುಖ್ಯರಸ್ತೆಯಲ್ಲಿ ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಮಲ್ಲೇಶ್ವರದಿಂದ ಶೇಷಾದ್ರಿಪುರ ಕಡೆಗೆ ಕಾರು ತೆರಳುತ್ತಿತ್ತು. ಆಗ ಹಠಾತ್‌ನೇ ಬೈಕ್ ಅಡ್ಡ ಬಂದ ಕಾರಣ ನಿಯಂತ್ರಣ ಕಳೆದುಕೊಂಡು ರಾಜಕಾಲುವೆಗೆ ಕಾರನ್ನು ಚಾಲಕ ಗುದ್ದಿಸಿದ್ದಾನೆ ಎಂದು ತಿಳಿದು ಬಂದಿದೆ.

10ಕ್ಕೆ ವಿವಿ ಪುರಂನಲ್ಲಿ ವಾದ್ಯ ಗಾನ ಸಂಭ್ರಮ

ಬೆಂಗಳೂರು: ಸಂಭ್ರಮ ಹವ್ಯಾಸಿ ಕಲಾ ಬಳಗ ವತಿಯಿಂದ 'ವಾದ್ಯ ಗಾನ ಸಂಭ್ರಮ' ಶೀರ್ಷಿಕೆಯಡಿ ಸಂಗೀತ ಕಾರ್ಯಕ್ರಮ ನಗರದ ವಿವಿ ಪುರಂನಲ್ಲಿರುವ ವಾಸವಿ ಹಾಸ್ಟೆಲ್ ಬಿಲ್ಡಿಂಗ್‌ನ ಮಾನಂದಿ



ಸಭಾಂಗಣದಲ್ಲಿ ಮೇ 10ರಂದು ಸಂಜೆ 5.30ಕ್ಕೆ ನಡೆಯಲಿದೆ. ಕರ್ನಾಟಕ ಕಲಾಶ್ರೀ ಪಂಡಿತ್ ಡಾ.ಸತೀಶ್ ಹಂಪಿಹೊಳಿ ಅವರ ವಿಶೇಷ ಪರಿಕಲ್ಪನೆ ಹಾಗೂ ನಿರ್ದೇಶನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಹಿರಿಯ ಕಲಾವಿದರಾದ ಬಾಲಾಜಿ, ಸಂಜೀವ್ ಕೊರ್ತಿ, ಎಂ.ಎನ್.ಸತ್ಯನಾರಾ ಯಣ, ಶ್ರೀನಿವಾಸ್ ಅನಂತ ರಾಮಯ್ಯ, ಗುರುರಾಜ ಹೊಳೆನರಸೀಪುರ, ಸ್ರೋತಸ್ವಿನಿ ಡಬೀರ್, ದೀಪಿಕಾ ಎಂ.ನಾಗರಾಜ್, ಸುತೇಜ್ ಆರ್. ಹರಿತ್ಸ, ರೋಹನ್ ಕುಮಾರ್, ಸುಹಾಸ್ ಎಸ್. ರಾವ್, ಸುಮೇಧ್ ಕಡೇಕಾರ್, ಕಲಾವಿದರು ಹಾಜರಿರುವರು.

ಪುತ್ರಿಗೆ ಕಾಟ ಕೊಟ್ಟ ನೆಂಟನನ್ನೇ ಕೊಂದವರ ಸೆರೆ

ಯಲಹಂಕ ರಾಜಕಾಲುವೆಯಲ್ಲಿ ಡೆಲಿವರಿ ಬಾಯ್ ಶವ ಪತ್ತೆ ಕೇಸ್ | ಬಾಗಲಕೋಟೆಯ 4 ಆರೋಪಿ ಸೆರೆ | ಮಿಕ್ಕವರಿಗೆ ಶೋಧ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪೋಕ್ಸೋ ಪ್ರಕರಣ ದಾಖಲಿಸಿದರೂ ಬುದ್ಧಿ ಕಲಿಯದೆ ತಮ್ಮ ಮಗಳಿಗೆ ಕಾಡುತ್ತಿದ್ದ ಸಂಬಂಧಿಯನ್ನು ಕೊಲೆ ಮಾಡಿ ರಾಜಕಾಲುವೆಗೆ ಎಸೆದಿದ್ದ ಯುವತಿಯ ತಂದೆ ಹಾಗೂ ಚಿಕ್ಕಪ್ಪ ಸೇರಿ ನಾಲ್ವರನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕು ಚಿಮ್ಮಡ ಗ್ರಾಮದ ಈರಯ್ಯ ದುಂಡಯ್ಯ ಮಠಪತಿ, ಅವರ ಸೋದರ ಚೆನ್ನಯ್ಯ ಹಾಗೂ ಸ್ನೇಹಿತರಾದ ಚೇತನ ಮಾದರ ಮತ್ತು ವಿನಾಯಕ ಗುರುವ ಬಂಧಿತರಾಗಿದ್ದು, ಇತ್ತೀಚೆಗೆ (ಮಾ.28) ಯಲಹಂಕ ಬಳಿ ರಮೇಶ್‌ನನ್ನು (36) ಹತ್ಯೆಗೈದು ಆರೋಪಿಗಳು ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಹಿಂಸೆ ಸಹಿಸಲಾರದೆ ಹತ್ಯೆ: ಈರಯ್ಯ ಹಾಗೂ ಮೃತ



ರಮೇಶ್ ಸೋದರ ಸಂಬಂಧಿಗಳಾಗಿದ್ದರು. ಆದರೆ, ವಾರಿಗೆಯಲ್ಲಿ ಈರಯ್ಯ ಅವರ ಮಗಳಿಗೆ ರಮೇಶ್ ಸೋದರನಾಗಬೇಕಿತ್ತು. ಅಪ್ರಾಪ್ತ ವಯಸ್ಸಿನ ಈರಯ್ಯ ಅವರ ಮಗಳ ಜತೆ ಅನುಚಿತ ವರ್ತನೆ ತೋರಿದ ಆರೋಪ ಮೇರೆಗೆ 2022ರಲ್ಲಿ ಬಾಗಲಕೋಟೆ ಜಿಲ್ಲೆ ಮುಧೋಳ ಠಾಣೆಯಲ್ಲಿ ರಮೇಶ್ ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಬಂಧಿತನಾಗಿ ಜೈಲು ಸೇರಿದ್ದ ರಮೇಶ್, ಜಾಮೀನು ಪಡೆದು ಹೊರಬಂದು ಮತ್ತೆ ಈರಯ್ಯ ಕುಟುಂಬದವರಿಗೆ ಬೆದರಿಕೆ ಹಾಕುತ್ತಿದ್ದ. ಆಗ ಮತ್ತೆ ಆತನ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಈರಯ್ಯ ಕುಟುಂಬದ ದೂರಿನ ಮೇರೆಗೆ ಪ್ರಕರಣ ದಾಖಲಾಯಿತು ಎಂದು ಪೊಲೀಸರು ವಿವರಿಸಿದ್ದಾರೆ.

ಈ ಬೆಳವಣಿಗೆ ಬಳಿಕ ತಮ್ಮ ಮಗಳನ್ನು ಬೆಂಗಳೂರಿಗೆ ಕರೆತಂದು ಈರಯ್ಯ ಶಿಕ್ಷಣ ಕೊಡಿಸುತ್ತಿದ್ದರು. ಕಳೆದ 15 ದಿನಗಳ ಹಿಂದಷ್ಟೇ ಬೆಂಗಳೂರಿಗೆ ಕೆಲಸ ಅರಸಿ ಬಂದಿದ್ದ ರಮೇಶ್, ಯಲಹಂಕ ಸಮೀಪದ ಅರಳಾಸಂದ್ರದಲ್ಲಿ ನೆಲೆಸಿದ್ದ. ಸ್ವಿಗ್ಗಿ ಡೆಲಿವರಿ ಬಾಯ್ ಆಗಿ ಆತ ದುಡಿದು ಜೀವನ ಸಾಗಿಸುತ್ತಿದ್ದ. ಇದೇ ವೇಳೆ ಬೆಂಗಳೂರಿನಲ್ಲಿ ತನ್ನ ಸಂಬಂಧಿ ಮಗಳು ಸರ್ಕಾರಿ ಕಾಲೇಜಿನಲ್ಲಿ ಬಿಕಾಂ ಓದುತ್ತಿರುವ ವಿಷಯ ಆತನಿಗೆ ಗೊತ್ತಾಯಿತು. ತರುವಾಯ ಮತ್ತೆ ತನ್ನ ಚಾಳಿ ಶುರು ಮಾಡಿದ್ದ. ಸಂತ್ರಸ್ತೆಯ ಕಾಲೇಜು ಬಳಿ ಹೋಗಿ ಆಕೆಯ ಹಿಂಬಾಲಿಸುವುದಕ್ಕೆ ಆರಂಭಿಸಿದ್ದ. ತನಗೆ ಮತ್ತೆ ರಮೇಶ್ ಕಾಟ ಕೊಡುತ್ತಿರುವ ವಿಷಯವನ್ನು ತಂದೆ ಈರಯ್ಯ ಅವರಿಗೆ ಸಂತ್ರಸ್ತೆ ತಿಳಿಸಿದ್ದಳು ಎಂದು ಹೇಳಲಾಗಿದೆ.

ಸೋದರ, ಸ್ನೇಹಿತರ ಸಾಥ್: ಮಾತುಕತೆ ನೆಪದಲ್ಲಿ ಕೊಲೆ

ತನ್ನ ಮಗಳಿಗೆ ಕಿರುಕುಳ ನೀಡುತ್ತಿರುವ ಸೋದರ ಸಂಬಂಧಿ ರಮೇಶ್ ಹತ್ಯೆಗೆ ಈರಯ್ಯ ನಿರ್ಧರಿಸಿದ್ದ. ಈ ಕೃತ್ಯಕ್ಕೆ ಅವರಿಗೆ ಸೋದರ ಚೆನ್ನಯ್ಯ ಹಾಗೂ ಸ್ನೇಹಿತರು ಸಾಥ್ ಕೊಟ್ಟಿದ್ದಾರೆ. ಅಂತೆಯೇ ಮಾ.27 ರಂದು ರಮೇಶ್‌ನನ್ನು ಮಾತುಕತೆ ನೆಪದಲ್ಲಿ ಕರೆಸಿದ್ದಾರೆ. ಬಳಿಕ ಕಂಠಮಟಾ ಮದ್ಯ ಕುಡಿಸಿದ ಬಳಿಕ ಆತನನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿ ಅರಳಾಳಸಂದ್ರ ಸಮೀಪ ರಾಜಕಾಲುವೆ ಬಿಸಾಡಿ ಆರೋಪಿಗಳು ಪರಾರಿಯಾಗಿದ್ದರು. ಮರುದಿನ ರಾಜ ಕಾಲುವೆಯಲ್ಲಿ ಮೃತದೇಹ ಪತ್ತೆಯಾಯಿತು. ಈ ಕೃತ್ಯದ ತನಿಖೆಗಿಳಿದ ಪೊಲೀಸರು, ಮೃತನ ಪೂರ್ವಾಪರ ಮಾಹಿತಿ ಕಲೆಹಾಕಿದಾಗ ಹಂತಕರ ಜಾಡು ಸಿಕ್ಕಿತು. ಈ ಸುಳಿವು ಆಧರಿಸಿ ಆರೋಪಿಗಳನ್ನು ಯಲಂಹಕ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಗರದಲ್ಲಿ ಸದ್ಯಕ್ಕಿಲ್ಲ ಮಿಸ್ಟ್ ಸ್ಪ್ರೇ ಅಳವಡಿಕೆ: ಜನರಿಗೆ ನಿರಾಸೆ

ಜಾರಿಗೆ ಹೆಚ್ಚು ವೆಚ್ಚ, ಅಳವಡಿಕೆ ಸಾಧ್ಯವಿಲ್ಲ: ಜಿಬಿಎ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ನಿಗಿ ನಿಗಿ ಕೆಂಡದಂತಹ ಬಿಸಿಲಿನ ತಾಪ ಹೆಚ್ಚಿರುವ ಸಿಗ್ನಲ್ ಅಥವಾ ಪ್ರದೇಶಗಳಲ್ಲಿ ಮಿಸ್ಟ್ ಸ್ಪ್ರೇ (ತಣ್ಣೀರ ಹನಿಗಳ ಸಿಂಚನ) ಮಾಡಲು ಪಾಲಿಕೆ ಚಿಂತನೆ ನಡೆಸಿತ್ತು. ಇದರಿಂದ ನಗರದ ಜನರೂ ಪುಳಕಿತರಾ ಗಿದ್ದರು. ಬಿಸಿಲ ಬೇಗೆಗೆ ಪಾಲಿಕೆ ಹೊಸ ವಿಧಾನ ತರುತ್ತದೆ ಎಂಬ ಆಸೆಯಲ್ಲಿದ್ದರು. ಆದರೆ, ಈ ಹೊಸ ವಿಧಾನ ಸದ್ಯಕ್ಕೆ ಜಾರಿಗೆ ಬರುವುದಿಲ್ಲ. ಈ ಯೋಜನೆ ಜಾರಿಗೆ ತರಲು ಐದು ಪಾಲಿಕೆಗಳಲ್ಲಿ ಹಣ, ಸಮಯ, ನೀರಿನ ಸಂಪರ್ಕ ಹೆಚ್ಚಿನ ಪ್ರಮಾಣದಲ್ಲಿ ಅಗತ್ಯವಿರುವು ದರಿಂದ ತಮ್ಮ ವ್ಯಾಪ್ತಿಗಳಲ್ಲಿ ಅಳವಡಿಕೆ ಸಾಧ್ಯವಿಲ್ಲ ಎಂದು ಮೌಖಿಕವಾಗಿ ತಿಳಿಸಿವೆ.



ಇದು ಕೇವಲ ಪ್ರಸ್ತಾವನೆ, ನಗರದಲ್ಲಿ ಬಿಸಿಲ ತಾಪ ಏರಿಕೆ ಸಮಸ್ಯೆಗೆ ಹಲವು ಸಾರ್ವಜನಿಕರು, ಸಂಘ ಸಂಸ್ಥೆಗಳು ಹಲವಾರು ಸಲಹೆ ನೀಡಿದ್ದರು. ಅವುಗಳನ್ನು ಐದೂ ಪಾಲಿಕೆಗಳಿಗೆ ಅಳವಡಿಸಿಕೊಳ್ಳಲು ಯೋಚನೆ ಇತ್ತು. ಆದ್ದರಿಂದ ಈ ಪ್ರಸ್ತಾವನೆಯನ್ನು ಎಲ್ಲ ಐದು ಪಾಲಿಕೆಗಳಿಗೂ ಕಳುಹಿಸಿ ಈ ಯೋಜನೆಯ ಕಾರ್ಯಸಾಧ್ಯತೆ ತಿಳಿಸಿ ಎಂದು ಕೇಳಲಾಗಿತ್ತು. ಆದರೆ, ಇದು ಸದ್ಯಕ್ಕೆ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಐದೂ ಪಾಲಿಕೆಗಳ ವ್ಯಕ್ತಪಡಿಸಿರುವುದಾಗಿ ಜಿಬಿಎ ವಿಶೇಷ ಆಯುಕ್ತರಾದ ಸುಷ್ಮಾ ಗೋಡ್ ಬೋಲೆ ಕನ್ನಡಪ್ರಭಕ್ಕೆ ತಿಳಿಸಿದರು.

ಈ ಯೋಜನೆ ಜಾರಿಗೆ ತರಲು ಎಲ್ಲಾ ಸಿಗ್ನಲ್‌ಗಳಲ್ಲಿ ನೀರಿನ ಸಂಪರ್ಕ ಅವಶ್ಯಕತೆ ಇದೆ. ನೀರನ್ನು ಸ್ಪ್ರೇ ಮಾಡುವ ಯಂತ್ರೋಪಕರಣಗಳು ಬೇಕು. ಯಾವ ಪ್ರಮಾಣದಲ್ಲಿ ಹೇಗೆ ಸಿಂಚನ ಮಾಡಬೇಕು ಎಂಬುದರ ಬಗ್ಗೆ ತಿಳಿದಿರಬೇಕು. ಇವೆಲ್ಲಾ ಅಗತ್ಯತೆಗಳನ್ನು 1 ತಿಂಗಳಲ್ಲಿ ಒದಗಿಸಲು ಸಾಧ್ಯವಿಲ್ಲ. ಮುಂಬರುವ ಸಭೆಗಳಲ್ಲಿ ಕೂಲಂಕಶವಾಗಿ ಚರ್ಚಿಸಿ ಮುಂದಿನ ವರ್ಷ ಜಾರಿಗೆ ತರಲಾಗುವುದು ಎಂದರು.

ಈಗಾಗಲೇ ಒಂದು ಅಧ್ಯಯನ ವರದಿ ಇದೆ. ಈ ವರದಿಯನ್ವಯ 5 ಪಾಲಿಕೆಗಳಿಗೆ ಪ್ರಸ್ತಾವನೆ ಕಳುಹಿ ಸಲಾ ಗಿದೆ. ಇನ್ನೆರಡು ತಿಂಗಳಲ್ಲಿ ಮಳೆ ಬೀಳುತ್ತಿದ್ದಂತೆ ಇವುಗಳ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಈಗ ಮಿಸ್ಟ್ ಸ್ಪ್ರೇ ಜಾರಿ ಈ ವರ್ಷ ಸಾಧ್ಯವಿಲ್ಲ.

ಬಿಸಿಲು ಹೆಚ್ಚಿರುವ ಕಾರಣ ಕಬ್ಬನ್ ಪಾರ್ಕ್‌ನ ರಸ್ತೆಯಲ್ಲಿ ಹವಾನಿಯಂತ್ರಿತ ಬಸ್ ನಿಲ್ದಾಣ ಸ್ಥಾಪಿಸಲಾಗಿತ್ತು. ಇಲ್ಲಿ, ಮಹಿಳೆಯರು ಮಕ್ಕಳು, ವಯಸ್ಸಾದವರು ಬಸ್ಸಿಗಾಗಿ ಕಾಯುವ ಸಮಯದಲ್ಲಿ ಇಲ್ಲಿ ಕುಳಿತು ದಣಿವಾರಿಸಿಕೊಳ್ಳುತ್ತಿದ್ದರು. ಆದರೆ, ಇದರ ನಿರ್ವಹಣೆ ವೆಚ್ಚ ಹೆಚ್ಚಿದ್ದರಿಂದ ಕಷ್ಟವಾಗುತ್ತಿತ್ತು. ಆದ್ದರಿಂದ ಅದನ್ನು ತೆರವುಗೊಳಿಸಿ ಮಾಮೂಲಿ ನಿಲ್ದಾಣ ಸ್ಥಾಪಿಸಲಾಗಿದೆ. ಹವಾನಿಯಂತ್ರಿತ ಬಸ್ ಶೆಲ್ಟರ್ ಇದ್ದರೂ ಅದು ಕೇವಲ ಬೇಸಿಗೆಯ ಎರಡು ತಿಂಗಳು ಮಾತ್ರ ಇರುತ್ತದೆ. ಉಳಿದ ತಿಂಗಳಲ್ಲಿ ನಗರದಲ್ಲಿ ಮಳೆ ಅಥವಾ ಚಳಿ ಹೆಚ್ಚಿರುತ್ತದೆ. ಆದ್ದರಿಂದ ಇದರ ಅಗತ್ಯವಿರುವುದಿಲ್ಲ ಎಂದು ತಿಳಿಸಿದರು.

ಜಪಾನ್, ಚೀನಾ, ಸೌದಿ ಅರೇಬಿಯಾ, ಸಿಂಗಪೂರ, ಇಟಲಿ ದೇಶಗಳಲ್ಲಿ ಬಿಸಿಲ ತಾಪಮಾನ ಹೆಚ್ಚಾದಾಗ ನಗರದಲ್ಲಿ ನಡೆದಾಡುವ ಹಾಗೂ ವಾಹನ ಸವಾರರನ್ನು ತಂಪಾಗಿಸಲು ಮಿಸ್ಟ್ ಸ್ಪ್ರೇ ಬಳಸಲಾಗುತ್ತದೆ. ಮಿಸ್ಟ್ ಸ್ಪ್ರೇಯರ್‌ಗಳನ್ನು ಉತ್ಪಾದಿಸುವ ಕಾರ್ಖಾನೆಗಳಿವೆ. ಆದರೆ, ವೆಚ್ಚ ಹೆಚ್ಚಿರುತ್ತದೆ.

ಸರ್ಕಾರಿ ಹುದ್ದೆ ಹೆಸರಲ್ಲಿ ಕೈ ನಾಯಕಿ ಟೋಪಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮಹಿಳಾ ನಾಯಕಿ ಹಾಗೂ ಅವರ ಸೋದರನ ವಿರುದ್ಧ ಸಿಸಿಬಿ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.

ಸಂಜಯನಗರ ಸಮೀಪದ ನಿವಾಸಿ ಎಚ್.ಜಿ.ಪವಿತ್ರಾ ಗೌಡ ಹಾಗೂ ಆಕೆಯ ಸೋದರ ಚರಣ್ ವಿರುದ್ಧ ಆರೋಪ ಬಂದಿದ್ದು, ಈ ಸಂಬಂಧ ಸಿಸಿಬಿ ಠಾಣೆಗೆ ಸಂತ್ರಸ್ತೆ ಪುಷ್ಪಾ ದೂರು ನೀಡಿದ್ದಾರೆ.

ಕಳೆದ 15 ವರ್ಷಗಳಿಂದ ಪವಿತ್ರಾ ಗೌಡ ಅವರಿಗೆ ಪುಷ್ಪಾ ಪರಿಚಯಸ್ಥರು. ಕಳೆದ ವರ್ಷ ತಾನು ಮಹಿಳಾ ಕಾಂಗ್ರೆಸ್ ಘಟಕದ ಪದಾಧಿಕಾರಿಯಾಗಿ ನೇಮಕವಾಗಿದ್ದು, ನನಗೆ ಹಲವು ಸಚಿವರು ಗೊತ್ತಿದ್ದಾರೆ. ಹಣ ಕೊಟ್ಟರೆ ಸರ್ಕಾರಿ ನೌಕರಿ ಕೊಡಿಸುವುದಾಗಿ ಆಕೆಗೆ ಪವಿತ್ರಾ ಭರವಸೆ ನೀಡಿದ್ದರು. ವಿಧಾನಸೌಧದ ಸಚಿವಾಲಯದ ದಲಾಯತ್ ಹುದ್ದೆಗೆ 15 ಲಕ್ಷ ರು ಬೇಡಿಕೆ ಇಟ್ಟಿದ್ದಳು.

ಈ ಮಾತು ನಂಬಿದ್ದ ಪುಷ್ಪಾ, ತನ್ನ ಪರಿಚಯದ ಇಬ್ಬರಿಂದ ಪವಿತ್ರಾ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ 24 ಲಕ್ಷ ವರ್ಗಾಯಿಸಿದ್ದರು. ಆದರೆ ಹಣ ಪಡೆದು ವರ್ಷ ಕಳೆದರೂ ಆಕೆ ಯಾವುದೇ ಹುದ್ದೆ ಕೊಡಿಸಿರಲಿಲ್ಲ. ಹೀಗಾಗಿ ಹಣ ವಾಪಸ್ ಕೊಡದಿದ್ದರೆ ಪೊಲೀಸರಿಗೆ ದೂರು ನೀಡುವುದಾಗಿ ಪುಷ್ಪಾ ಹೇಳಿದ್ದರು. ಆಗ 10 ಲಕ್ಷ ರು ಮರಳಿಸಿದ ಆಕೆ, ಇನ್ನುಳಿದ ಹಣ ಕೇಳಿದ್ದಕ್ಕೆ ಜೀವ ಬೆದರಿಕೆ ಹಾಕಿದರು ಎಂದು ಆರೋಪಿಸಿದ್ದಾರೆ.

ಬಿಎಂಟಿಸಿ ನಿರ್ವಾಹಕಿ ಮೇಲೆ ಹಲ್ಲೆ: ಬಂಧನ

ಕಂಡಕ್ಟರ್‌ಗೆ ಬೈಕ್ ಸವಾರನಿಂದ ನಿಂದನೆ

ಬೆಂಗಳೂರು: ಮಹಿಳಾ ಬಸ್ ಕಂಡಕ್ಟರ್‌ಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹೆಲ್ಮೆಟ್‌ನಿಂದ ತಲೆಗೆ ಹಲ್ಲೆ ನಡೆಸಿದ ಆರೋಪದ ಮೇಲೆ ಸವಾರನನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ. ಬಾಣಸವಾಡಿಯ ಲಿಂಗರಾಜಪುರ



ನಿವಾಸಿ ಕುಮಾರ್ (38) ಬಂಧಿತ ಆರೋಪಿ. ಆರ್.ಆರ್ ನಗರ ಬಿಎಂಟಿಸಿ ಘಟಕ-21ರ ಮಹಿಳಾ ಕಂಡಕ್ಟರ್ ಮಂಗಳಾ ಎಂಬುವವರ ಪತಿ (ಡ್ರೈವರ್) ಚಲಾಯಿಸುತ್ತಿದ್ದ ಬಸ್‌ನಲ್ಲೇ ಕರ್ತವ್ಯದಲ್ಲಿ ಇದ್ದರು. ಭಾನುವಾರ ಸಂಜೆ 5 ಗಂಟೆಗೆ ಈ ಬಸ್ ಬಾಪೂಜಿನಗರ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಪ್ರಯಾಣಿಕರನ್ನು ಕರೆದುಕೊಂಡು ಮೈಸೂರು ರಸ್ತೆ ಮಾರ್ಗವಾಗಿ ಹೋಗುತ್ತಿದ್ದಾಗ ಕೆಂಗೇರಿಯ ಪೆಟ್ರೋಲ್ ಬಂಕ್ ಬಳಿಯ ಸಿಗ್ನಲ್ ಬಳಿ ಟ್ರಾಫಿಕ್ ಜಾಮ್ ಆಗಿದ್ದು, ಆ ವೇಳೆ ಆ್ಯಂಬುಲೆನ್ಸ್ ಇದೇ ಮಾರ್ಗವಾಗಿ ಬಂದಿದೆ. ಅಕ್ಕಪಕ್ಕ ವಾಹನಗಳಿದ್ದ ಕಾರಣ ಆ್ಯಂ ಬುಲೆನ್ಸ್‌ಗೆ ಜಾಗ ಕೊಡಲು ಸಾಧ್ಯವಾಗಲಿಲ್ಲ. ಆ ವೇಳೆ ಬೈಕ್ ಸವಾರ ಬಸ್ ಹತ್ತಿ ಚಾಲಕನ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ. ಆಗ ಮಂಗಳಾ ಸಮಾಧಾನ ಹೇಳಿ ಆತನನ್ನು ಬಸ್ಸಿಂದ ಇಳಿಯುವಂತೆ ಸೂಚಿಸಿದ್ದಾರೆ. ಇದರಿಂದ ಆಕ್ರೋಶಗೊಂಡ ಆತ ಕೆಳಗಿಳಿದು ಹಲ್ಲೆ ಮಾಡಿದ್ದಾನೆ.

ಬಾರಲ್ಲಿ ನಡೆದ ಗುಂಪು ಗಲಾಟೆ ಕೊಲೇಲಿ ಅಂತ್ಯ

ಕುಡಿದ ಮತ್ತಲ್ಲಿ ಗೆಳೆಯರ ಜತೆ ಜಗಳ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮದ್ಯದಂಗಡಿಯಲ್ಲಿ ಕುಡಿದ ಮತ್ತಿನಲ್ಲಿ ಎರಡು ಗುಂಪುಗಳ ಮಧ್ಯೆ ಉಂಟಾದ ಜಗಳವು ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಆರ್.ಟಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ಚಾಮುಂಡಿ ನಗರದ ನಿವಾಸಿ ಪುಟ್ಟಸ್ವಾಮಿ (40) ಕೊಲೆಯಾದ ದುರ್ದೈವಿ. ತನ್ನ ಸ್ನೇಹಿತರ ಜತೆ ಮದ್ಯ ಸೇವನೆಗೆ ಭಾನುವಾರ ರಾತ್ರಿ ಸ್ವಾಮಿ ತೆರಳಿದ್ದಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ಕೂಲಿ ಕೆಲಸ ಮಾಡಿಕೊಂಡಿದ್ದ ಸ್ವಾಮಿ, ತನ್ನ ಕುಟುಂಬದ ಜತೆ ನೆಲೆಸಿದ್ದಾರೆ. ಮನೆ ಸಮೀಪದ ಬಾರ್‌ಗೆ ಗೆಳೆಯರ ಜತೆ ರಾತ್ರಿ ಮದ್ಯ ಸೇವನೆಗೆ ಆತ ಹೋಗಿದ್ದ. ಆ ವೇಳೆ ಕುಡಿಡ ಮತ್ತಿನಲ್ಲಿ ಸ್ವಾಮಿ ಗೆಳೆಯರಿಗೂ ಮತ್ತೆ ಕೆಲವರಿಗೆ ಜಗಳವಾಗಿದೆ. ಆಗ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಈ ಹಂತದಲ್ಲಿ ಕೆರಳಿದ ಕಿಡಿಗೇಡಿ, ಸ್ವಾಮಿಗೆ ಮದ್ಯದ ಬಾಟಲ್‌ನಿಂದ ಹಲ್ಲೆ ನಡೆಸಿದ್ದಾನೆ. ಆಗ ತೀವ್ರವಾಗಿ ಗಾಯಗೊಂಡು ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ತಿಳಿದು ಬಂದಿದೆ.

ತನಿಖೆ ಲೋಕಾಯುಕ್ತ ಎಸ್‌ಪಿ ನೇತೃತ್ವದ ತಂಡ ಘಟನಾ ಸ್ಥಳಕ್ಕೆ ಭೇಟಿ

ಕಾಂಪೌಂಡ್ ಕುಸಿದು 7 ಜನರ ಸಾವು: ಆಸ್ಪತ್ರೇಲಿ ತನಿಖಾ ತಂಡ ಪರಿಶೀಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಇತ್ತೀಚೆಗೆ ಸುರಿದ ಭಾರಿ ಗಾಳಿ-ಮಳೆಗೆ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಗೋಡೆ ಕುಸಿದು ಏಳು ಮಂದಿ ಮೃತಪಟ್ಟಿದ್ದ ಪ್ರಕರಣದ ಸಂಬಂಧ ಲೋಕಾಯುಕ್ತ ಎಸ್.ಪಿ. ನೇತೃತ್ವದ ತನಿಖಾ ತಂಡ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದೆ.

ಪ್ರಕರಣದ ಸಂಬಂಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಲೋಕಾಯುಕ್ತವು ತನಿಖೆಯ ಸಲುವಾಗಿ ಪೊಲೀಸ್ ಅಧೀಕ್ಷಕರ ದರ್ಜೆಯ ಅಧಿಕಾರಿ ಯನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿತ್ತು. ಈ ತಂಡಕ್ಕೆ ಓರ್ವ ಜಿಲ್ಲಾ ನ್ಯಾಯಾಧೀಶರು, ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಎಂಜಿನಿಯರ್ ಹಾಗೂ ಇತರೇ ಅಧಿಕಾರಿಗಳನ್ನು ನೇಮಿಸಲಾಗಿತ್ತು.

ಈ ತಂಡ ಸೋಮವಾರ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಸ್ಥಳಕ್ಕೆ ಭೇಟಿ ನೀಡಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳ ಸಮ್ಮುಖದಲ್ಲಿ ಪ್ರಾಥಮಿಕ ಸಾಕ್ಷ್ಯಗಳನ್ನು ಸಂಗ್ರಹಿಸಿತು.

ಅಧಿಕಾರಿಗಳಿಗೆ ನೋಟೀಸ್: ಘಟನೆಗೆ ಸಂಬಂಧಿಸಿದಂತೆ



ಅಧಿಕಾರಿಗಳಿಗೆ ತನಿಖಾ ತಂಡ ನೋಟೀಸ್ ನೀಡಿದ್ದು, ಅಗತ್ಯ ಮಾಹಿತಿಗಳನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ.

ಲೋಕಾಯುಕ್ತರು ಈ ತನಿಖಾ ತಂಡಕ್ಕೆ ಪ್ರಕರಣದಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಮೇ 16ರೊಳಗೆ ವಿವರವಾದ ವರದಿ ಸಲ್ಲಿಸಲು ಸೂಚಿಸಿದ್ದಾರೆ. ಅಲ್ಲದೇ ಲೋಕಾಯುಕ್ತರು ಈ ಪ್ರಕರಣದ ವಿಚಾರಣೆಯನ್ನು ಮೇ 20ರ ಮಧ್ಯಾಹ್ನ 12:30ಕ್ಕೆ ನಿಗದಿಗೊಳಿಸಿದ್ದಾರೆ.

ಸಭೆ ಮಳೆಯಿಂದ ಜಲಾವೃತ ಆದ ರಸ್ತೆ ಪಕ್ಕದ ಮೋರಿ ಕ್ಲೀನ್‌ಗೆ ಆದೇಶ

ರಸ್ತೆ ಬದಿಯ ಚರಂಡಿಗಳ ಸ್ವಚ್ಛತೆ ಮಾಡಲು ಮಹೇಶ್ವರರಾವ್ ತಾಕೀತು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಸ್ತೆ ಬದಿ ಚರಂಡಿ, ಶೋಲ್ಡರ್ ಡ್ರೈನ್ ಹಾಗೂ ಗ್ರೇಟಿಂಗ್



ಗಳನ್ನು ತ್ವರಿತವಾಗಿ ಸ್ವಚ್ಛಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಧಿಕಾರಿಗಳೊಂದಿಗೆ ಸೋಮ ವಾರ ಸಭೆ ನಡೆಸಿದ ಅವರು, ರಾಜಕಾಲುವೆಗಳಿಗೆ ಸಂಪರ್ಕಿ ಸುವ ಮೋರಿಗಳು, ಆರ್ಟೀರಿ ಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಮಳೆ ನೀರು ಚರಂಡಿಗಳಲ್ಲಿ ತಕ್ಷಣ ಹೂಳು ತೆಗೆಯಬೇಕು. ಪ್ರತಿ ವಾರ್ಡ್‌ನಲ್ಲೂ ತಂಡಗಳನ್ನು ರಚಿಸಿ ಮಳೆ ನೀರು ಚರಂಡಿಗಳಲ್ಲಿ ಡ್ರೈನ್ ಸ್ಲ್ಯಾಬ್ ಅಥವಾ ಗ್ರೇಟಿಂಗ್‌ಗಳನ್ನು ತೆರೆದು ನೀರು ಸರಾಗವಾಗಿ ಹರಿಯಲು ಅವಕಾಶವಿದೆಯೇ ಅಥವಾ ಹೂಳು ತುಂಬಿದೆಯೇ ಎಂಬುದನ್ನು ಪರಿಶೀಲಿಸಬೇಕು. ರಾಜಕಾಲುವೆಗೆ ಸಂಪರ್ಕಿಸುವ ಮಾರ್ಗದಲ್ಲಿನ ಎಲ್ಲಾ ಅಡೆತಡೆಗಳನ್ನು ನಿವಾರಿಸಬೇಕು. ಕೆಲವು ಕಡೆ ಮಳೆ ನೀರು ಚರಂಡಿ ಮಾರ್ಗಕ್ಕೆ ಅಡ್ಡಲಾಗಿ ಒಳಚರಂಡಿ, ಕುಡಿಯುವ ನೀರಿನ ಪೈಪ್ ಹಾದುಹೋಗಿದ್ದು, ಜಲಮಂಡಳಿಯೊಂದಿಗೆ ಚರ್ಚಿಸಿ ಅಗತ್ಯವಿದ್ದರೆ ಸ್ಥಳಾಂತರಕ್ಕೆ ಕ್ರಮ ವಹಿಸಬೇಕು ಎಂದು ಸೂಚಿಸಿದರು. ಮಳೆ ನೀರು ನಿಂತಿರುವ ಬಗ್ಗೆ ಹಲವು ದೂರುಗಳು: ಏ.29ರ ಮಳೆಗೆ ನಗರಾದ್ಯಂತ ಹಲವಾರು ಕಡೆ ಮಳೆ ನೀರು ರಸ್ತೆಗಳಲ್ಲಿ ನಿಂತಿರುವುದು ಮತ್ತು ಕೆಲವು ಕಡೆ ಮನೆಗಳಿಗೆ, ಕಟ್ಟಡಗಳ ಬೇಸ್ಮೆಂಟ್‌ಗೆ ನೀರು ನುಗ್ಗಿರುವ ಬಗ್ಗೆ ಜಿಬಿಎ ನಿಯಂತ್ರಣ ಕೊಠಡಿಗೆ ಹಲವಾರು ದೂರುಗಳು ಬಂದಿವೆ ಎಂದರು.

ಸ್ವಚ್ಛತೆ ಕೆಲಸ ಆರಂಭ

ಅನೇಕ ರಸ್ತೆಗಳಲ್ಲಿ ಡ್ರೈನೇಜ್ ವೆಂಟ್‌ಗಳು ಕಸದಿಂದ ಬಂದ್ ಆಗಿ ಮಳೆ ನೀರು ಹೋಗಲು ಸಾಧ್ಯವಾಗದೆ ರಸ್ತೆ ಜಲಾವೃತ ಆಗಿದ್ದವು. ಇವುಗಳ ಸ್ವಚ್ಛತೆಯನ್ನು ಆರಂಭಿಸಲಾಗಿದೆ.

ಪತಿಯ ಕಿರುಕುಳಕ್ಕೆ 3 ಮಕ್ಕಳ ಜತೆ ಮನೆ ಬಿಟ್ಟುಹೋದ ಪತ್ನಿ

ಹೆಂಡತಿ ಕಾಣೆ ಎಂದು ದೂರು ನೀಡಿದ್ದ ಗಂಡ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಗುವನ್ನು ಮಾರಾಟ ಮಾಡಿ ಪತ್ನಿ ಕಾಣೆಯಾಗಿದ್ದಾಳೆ ಎಂದು ಪತಿ ಆರೋಪಿಸಿ ದೂರು ನೀಡಿದ್ದ ಪ್ರಕರಣ ಸಂಬಂಧ ತನಿಖೆ ಕೈಗೊಂಡಿದ್ದ ವಿವೇಕನಗರ ಪೊಲೀಸರು ಮಹಿಳೆಯನ್ನು ಪತ್ತೆ ಹಚ್ಚಿದ್ದು, ಆಕೆ ಪತಿಯ ಕಿರುಕುಳದಿಂದ ಬೇಸತ್ತು ಮೂವರು ಮಕ್ಕಳೊಂದಿಗೆ ಮನೆ ತೊರೆದಿರುವುದು ಗೊತ್ತಾಗಿದೆ.

ಪತ್ನಿ ವಿರುದ್ಧ ಆರೋಪಿಸಿ ತಾವರೆಕೆರೆ ನಿವಾಸಿ ರವಿಬಾಬು ಇತ್ತೀಚೆಗೆ ಪೊಲೀಸರಿಗೆ ದೂರು ನೀಡಿದ್ದರು. ಸದ್ಯ ರವಿಬಾಬು ಪತ್ನಿ ಮಕ್ಕಳೊಂದಿಗೆ ಸುರಕ್ಷಿತವಾಗಿದ್ದಾಳೆ

ತಾವರೆಕೆರೆ ನಿವಾಸಿ ರವಿಬಾಬು ಎಂಬುವವರು ನಗರದ ಆಸ್ಟಿನ್ ಟೌನ್ ನಿವಾಸಿ ಮಹಿಳೆಯನ್ನು 16 ವರ್ಷದ ಹಿಂದೆ ಮದುವೆಯಾಗಿದ್ದು, ದಂಪತಿಗೆ ಮೂವರು ಮಕ್ಕಳಿದ್ದಾರೆ. ಮನೆಯಲ್ಲಿ ದಂಪತಿ ನಡುವೆ ಆಗಾಗ್ಗೆ ಜಗಳವಾಗುತ್ತಿತ್ತು. ಇದರಿಂದ ಬೇಸತ್ತು ರವಿಬಾಬು ಪತ್ನಿ ತನ್ನ ಮೂವರು ಮಕ್ಕಳನ್ನು ಕರೆದುಕೊಂಡು ತವರು ಮನೆಗೆ ಹೋಗಿದ್ದಾರೆ. ತನ್ನ ತವರು ಮನೆಯಲ್ಲಿಯೂ ಜಗಳವಾಗಿದ್ದರಿಂದ ಬೇಸತ್ತ ಮನೆ ಬಿಟ್ಟು ಹೋಗಿದ್ದಾರೆ. ಈ ಹಿನ್ನೆಲೆಯಲ್ಲಿ ಪತ್ನಿ ಒಂದು ಮಗುವನ್ನು ಮಾರಿ, ಕಾಣೆಯಾಗಿದ್ದಾಳೆಂದು ವಿವೇಕನಗರ ಠಾಣೆಗೆ ರವಿಬಾಬು ದೂರು ನೀಡಿದ್ದರು. ಈ ಬಗ್ಗೆ ತನಿಖೆ ಕೈಗೊಂಡಾಗ ಗಂಡನ ಕಿರುಕುಳಕ್ಕೆ ಬೇಸತ್ತು ಮನೆ ಬಿಟ್ಟು ಹೋಗಿದ್ದಾಳೆ ಎಂಬುದು ಗೊತ್ತಾಗಿದೆ.

ಪತಿಯ ವಿರುದ್ಧವೇ ಮಹಿಳೆ ಆರೋಪ: ಪತಿ ರವಿಬಾಬುಗೆ ಬೇರೆ ಮಹಿಳೆಯರ ಜತೆ ಸಂಬಂಧವಿದೆ. ಆತ ಎರಡೆರಡು ಮೊಬೈಲ್‌ಗಳನ್ನು ಬಳಸುತ್ತಾನೆ. ಆತನ ಕಿರುಕುಳದಿಂದಲೇ ಮನೆಬಿಟ್ಟು ಬಂದಿರುವುದಾಗಿ ಮಹಿಳೆ ಹೇಳಿಕೆ ನೀಡಿದ್ದಾಳೆ.

ಸುದ್ದಿ ಸಿಂಚನ

ಉಪಚುನಾವಣೆ ಗೆಲುವು ಕಾಂಗ್ರೆಸ್ ಕಾರ್ಯಕರ್ತಗೆ ಸಂದ ಜಯ: ಸುರ್ಜೇವಾಲ



ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸಾಧಿಸಿರುವ ಗೆಲುವು ಪಕ್ಷದ ಕಾರ್ಯಕರ್ತರಿಗೆ ಸಂದ ಜಯ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬಣ್ಣಿಸಿದ್ದಾರೆ. ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಹಾಗೂ ದಾವಣಗೆರೆ ದಕ್ಷಿಣದಲ್ಲಿ ಸಮರ್ಥ್ ಶಾಮನೂರು ಅವರು ಬಿಜೆಪಿಯನ್ನು ಮಣಿಸಿ ವಿಜಯ ಮಾಲೆ ಧರಿಸಿದ್ದಾರೆ. ಈ ಫಲಿತಾಂಶವು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಜನತೆ ನೀಡಿದ ಸಮ್ಮತಿಯಾಗಿದೆ. ಇದು, ಗ್ಯಾರಂಟಿಗಳಿಗೆ ಜನರಿಂದ ಸಿಕ್ಕ ಮನ್ನಣೆ, ಕಾಂಗ್ರೆಸ್ ಕಾರ್ಯಕರ್ತರ ಜಯ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ನಾಯಕರ ಸಂಘಟಿತ ಗೆಲುವು ಎಂದು ಹೇಳಿದ್ದಾರೆ. ಉಪ ಚುನಾವಣೆಯಲ್ಲಿ ಗೆದ್ದ ಇಬ್ಬರೂ ನೂತನ ಶಾಸಕರಿಗೆ ಅಭಿನಂದನೆ ತಿಳಿಸುತ್ತೇನೆ. ಗೆಲುವಿಗಾಗಿ ನೆಲಮಟ್ಟದಲ್ಲಿ ಶ್ರಮಿಸಿದ ಪ್ರತಿಯೊಬ್ಬ ಕಾಂಗ್ರೆಸ್ ನಾಯಕರು, ಸಚಿವರು, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು ಹಾಗೂ ಪದಾಧಿಕಾರಿಗಳಿಗೆ ಧನ್ಯವಾದ ಹೇಳಬಯಸುತ್ತೇನೆ ಎಂದು ಹೇಳಿದ್ದಾರೆ.

4 ಗಂಟೆ ಕಬ್ಬನ್ ಪಾರ್ಕ್ ಮೆಟ್ರೋ ಸೇವೆ ವ್ಯತ್ಯಯ

ಬೆಂಗಳೂರು: ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಸೋಮವಾರ ಬೆಳಗ್ಗೆ 7 ಗಂಟೆಯಿಂದ 11ರವರೆಗೆ ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣದಲ್ಲಿ ರೈಲುಗಳ ನಿಲುಗಡೆ ಇಲ್ಲದ ಕಾರಣ ನಿಲ್ದಾಣವನ್ನು ಬಂದ್ ಮಾಡಲಾಗಿತ್ತು. ನಿಲ್ದಾಣದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡ ಕಾರಣ ಎಸ್ಕಲೇಟರ್, ಲಿಫ್ಟ್, ಟಿಕೆಟ್ ಕೌಂಟರ್‌ಗಳು ಕಾರ್ಯನಿರ್ವಹಿಸದೇ, ಇಡೀ ನಿಲ್ದಾಣ ಕತ್ತಲಾಗಿತ್ತು. ಇದರಿಂದ ಪ್ರಯಾಣಿಕರಿಗಾಗುವ ತೊಂದರೆ ತಪ್ಪಿಸಲು ನಿಲ್ದಾಣವನ್ನು ನಾಲ್ಕು ಗಂಟೆಗಳ ಕಾಲ ಬಂದ್ ಮಾಡಲಾಗತ್ತು. ಹೀಗಾಗಿ ಪ್ರಯಾಣಿಕರು ಕಬ್ಬನ್ ಉದ್ಯಾನ ನಿಲ್ದಾಣದ ಅಕ್ಕಪಕ್ಕದ ನಿಲ್ದಾಣಗಳಾದ ವಿಧಾನಸೌಧ ಮತ್ತು ಎಂಜಿ ರಸ್ತೆ ನಿಲ್ದಾಣಗಳಲ್ಲಿ ಇಳಿಯಬೇಕಾಯಿತು. 11 ಗಂಟೆಯ ವೇಳೆಗೆ ವಿದ್ಯುತ್ ಪೂರೈಕೆ ಸಮಸ್ಯೆಯನ್ನು ನಿವಾರಿಸಿ, ನಂತರ ಪ್ರಯಾಣಿಕರ ಸೇವೆಗೆ ನಿಲ್ದಾಣವನ್ನು ತೆರೆಯಲಾಯಿತು.

ನಗರದ ಪಾದಚಾರಿ ರಸ್ತೆಗಳು ಓಡಾಟಕ್ಕೆ ಅಯೋಗ್ಯ: ವರದಿ

7 ವಾರ್ಡ್‌ಗಳಲ್ಲಿ ಬೆಂಗಳೂರು ನವನಿರ್ಮಾಣ ಪಾರ್ಟಿ ಸಮೀಕ್ಷೆ ಸಂಪೂರ್ಣ ಹದಗೆಟ್ಟ ಪಾದಚಾರಿ ಮಾರ್ಗದಲ್ಲಿ ಸಿಟಿಜನ ಓಡಾಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಪಾದಚಾರಿ ಮಾರ್ಗಗಳು ಜನರ ಸುರಕ್ಷಿತ ಓಡಾಟಕ್ಕೆ ಯೋಗ್ಯವಲ್ಲ ಎಂದು ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) ಸಮೀಕ್ಷಾ ವರದಿ ತಿಳಿಸಿದೆ. ಏಳು ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗಗಳ ಸ್ಥಿತಿಗತಿ ಕುರಿತು ನಡೆಸಿದ ಸಮೀಕ್ಷೆಯ ಪ್ರಕಾರ, ಪಾದಚಾರಿ ಮಾರ್ಗಗಳು ಸಂಪೂರ್ಣವಾಗಿ ಹದಗೆಟ್ಟಿವೆ. ಸಂಚಾರಕ್ಕೆ ಯೋಗ್ಯವಾಗಿಲ್ಲ. ಆದರೂ ನಾಗರಿಕರು ಕಷ್ಟಪಟ್ಟು ಅನಿವಾರ್ಯವಾಗಿ ಓಡಾಡುತ್ತಿದ್ದಾರೆ.

ಎಚ್‌ಎಸ್‌ಆರ್‌ಲೇಔಟ್, ಕಲ್ಯಾಣ ನಗರ, ಬಿಳೇಕಹಳ್ಳಿ, ಯಲೇನಹಳ್ಳಿ, ದೊಡ್ಡಕಾಮನಹಳ್ಳಿ, ಶಾಕಂಬರಿನಗರ ಮತ್ತು ಸಾರಕ್ಕಿ ವಾರ್ಡ್‌ಗಳ ಏರಿಯಾ ಸಭಾಗಳು ನಡೆಸಿದ ಸುಮಾರು 5.25 ಕಿ.ಮೀ ಮಾರ್ಗದಲ್ಲಿ ಏಳು ವ್ಯವಸ್ಥಿತ ಸಮೀಕ್ಷೆಗಳನ್ನು ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ. ಶೇ.100ರಷ್ಟು ಪಾದಚಾರಿ ಮಾರ್ಗಗಳು ಕನಿಷ್ಠ ದರ್ಜೆಯ ಮಾನದಂಡಗಳನ್ನು ಪೂರೈಸುವಲ್ಲಿಯೂ ವಿಫಲವಾಗಿರುವುದು ಕಂಡು ಬಂದಿದೆ.

ರಸ್ತೆಯಲ್ಲೇ ಓಡಾಟ: ಓಡಾಡಲು ಸರಿಯಾದ ಹಾದಿಯಿಲ್ಲದೇ ಜನರು ರಸ್ತೆಯಲ್ಲೇ ಓಡಾಡಬೇಕಾಗುತ್ತದೆ. ಸಮೀಕ್ಷೆ ನಡೆಸಿದ ಶೇ.83ರಷ್ಟು ಭಾಗಗಳಲ್ಲಿ ಪಾದಚಾರಿ ಮಾರ್ಗಗಳು ಅಸ್ತಿತ್ವದಲ್ಲಿದ್ದರೂ, ಅವುಗಳಲ್ಲಿ ಒಂದೂ ಸರಿಯಾಗಿಲ್ಲ. ಇನ್ನು ಶೇ. 67ರಷ್ಟು ಮಾರ್ಗಗಳಲ್ಲಿ ನೀರು ನಿಂತಿರುವುದು, ರಾತ್ರಿ ವೇಳೆ ಸರಿಯಾಗಿ ಬೆಳಕು ಇಲ್ಲದಿರುವುದು ಅಥವಾ ಬೀದಿ ದೀಪಗಳೇ ಇಲ್ಲದಿರುವುದು ಜನರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ.

ವಿಕಲಚೇತನ ಸ್ನೇಹಿ ಮಾರ್ಗವಿಲ್ಲ: ವಿಕಲಚೇತನ ಸ್ನೇಹಿ ಪಾದಚಾರಿ ಮಾರ್ಗವಂತೂ ಎಲ್ಲಿಯೂ ಕಂಡುಬಂದಿಲ್ಲ. ಅಲ್ಲದೆ, ಶೇ. 83ರಷ್ಟು ಪಾದಚಾರಿ ಮಾರ್ಗಗಳಲ್ಲಿ ಪಾರ್ಕಿಂಗ್ ಕಟ್ಟಡ ಅವಶೇಷ, ಕಸ ಎಸೆದಿರುವುದು ಕಂಡು ಬಂದಿದೆ ಎಂದು ಬಿಎನ್‌ಪಿ ಹೇಳಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಬಿಎನ್‌ಪಿ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್, ನಗರದ ಪಾದಚಾರಿಗಳ ಸುರಕ್ಷತೆ ಬಗ್ಗೆ ಸ್ಥಳೀಯ ಅಧಿಕಾರಿಗಳಿಗಿರುವ ನಿರ್ಲಕ್ಷ್ಯವನ್ನು ಈ ಸಮೀಕ್ಷಾ ವರದಿ ಬಯಲಿಗೆಳೆದಿದೆ. ತಕ್ಷಣವೇ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಬೇಕು. ಸೂಕ್ತ ನಿರ್ವಹಣೆ ಮಾಡಬೇಕು ಎಂದು ಪಾಲಿಕೆಗೆ ಶಿಫಾರಸು ಮಾಡಲಾಗಿದೆ ಎಂದು ಹೇಳಿದ್ದಾರೆ.



ನಗರದ ಪಾದಚಾರಿ ಮಾರ್ಗವನ್ನು ದುರಸ್ತಿ ಮಾಡುತ್ತಿರುವುದು.

ಸಮಾನ ವೇತನಕ್ಕೆ ಆಗ್ರಹಿಸಿ ಸಾರಿಗೆ ನೌಕರರ ಪ್ರತಿಭಟನೆ

ಕೆಎಸ್‌ಆರ್‌ಟಿಸಿ 4 ನಿಗಮಗಳ ಸಂಘಟನೆಗಳ ಒಕ್ಕೂಟ ಆಗ್ರಹ



ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಾಲ್ಕು ನಿಗಮಗಳ ಸಂಘಟನೆಗಳ ಒಕ್ಕೂಟ'ದಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಲಾಯಿತು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಾರಿಗೆ ನೌಕರರಿಗೆ ಸರ್ಕಾರಿ ನೌಕರರಂತೆ ಸಮಾನ ವೇತನ ನೀಡಬೇಕು ಎಂದು ಆಗ್ರಹಿಸಿ 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಾಲ್ಕು ನಿಗಮಗಳ ಸಂಘಟನೆಗಳ ಒಕ್ಕೂಟ'ದ ನೇತೃತ್ವದಲ್ಲಿ ನೌಕರರು ಸೋಮವಾರ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳಲ್ಲಿ ಪ್ರತಿ ದಿನ ಒಂದು ಕೋಟಿಗೂ ಅಧಿಕ ಪ್ರಯಾಣಿಕರಿಗೆ ಸೇವೆ ನೀಡಲು 1.15 ಲಕ್ಷಕ್ಕೂ ಅಧಿಕ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಸರ್ಕಾರಿ ನೌಕರರು ಹಾಗೂ ನಿಗಮ-ಮಂಡಳಿಗಳ ನೌಕರರಿಗೆ ಹೋಲಿಸಿದರೆ ನಮ್ಮ ವೇತನ ಕಡಿಮೆಯಾಗಿದ್ದೂ ಅಧಿಕ ಸೌಲಭ್ಯಗಳೂ ಇಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಜೊತೆಗೆ ಸರ್ಕಾರದ ಮಹತ್ವಾಕಾಂಕ್ಷಿ ಶಕ್ತಿ ಯೋಜನೆಯು ಜನಪ್ರಿಯವಾಗಲು ಕಾರಣಕರ್ತರಾಗಿರುವ ನೌಕರರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಲಾಯಿತು.

ಉಪಸಮರ ಜಯ: ಡಿಸಿಎಂಗೆ ಸಿಹಿ ತಿನ್ನಿಸಿದ ಸಲೀಂ ಅಹ್ಮದ್



ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್ ಕೆಪಿಸಿಸಿ ಕಚೇರಿಯಲ್ಲಿ ಸಿಹಿ ತಿನ್ನಿಸಿ ಸಂಭ್ರಮಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಹಾಜರಿದ್ದರು.

ಕೇರಳ ಜಯ: ಕಲ್ಲಿಕೋಟೇಲಿ ಕೇಕ್ ಕತ್ತರಿಸಿ ಜಮೀರ್ ಸಂಭ್ರಮ



ಕೇರಳದಲ್ಲಿ ಯುಡಿಎಫ್ ಜಯಭೇರಿ ಹಿನ್ನೆಲೆ ಕಲ್ಲಿಕೋಟೆಯಲ್ಲಿ ಸಚಿವ ಜಮೀರ್ ಅಹ್ಮದ್‌ಖಾನ್ ಅವರು ಯುವ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಕೇಕ್ ಕತ್ತರಿಸಿ ವಿಜಯೋತ್ಸವ ಆಚರಿಸಿದರು. ಅವರಿಗೆ ಕಲ್ಲಿಕೋಟೆ, ಕಣ್ಣೂರು, ವಯನಾಡು, ಕಾಸರಗೋಡು, ಅಲೆಪ್ಪಿ ಇತರೆ ಜಿಲ್ಲೆಗಳ 33 ವಿಧಾನಸಭೆ ಕ್ಷೇತ್ರಗಳ ಜವಾಬ್ದಾರಿ ನೀಡಲಾಗಿತ್ತು. 27 ಕ್ಷೇತ್ರಗಳಲ್ಲಿ ಯುಡಿಎಫ್ ಗೆಲುವು ಸಾಧಿಸಿದೆ.

3 ರಾಜ್ಯದಲ್ಲಿ ಬಿಜೆಪಿ ಜಯ: ಅಶೋಕ್ ಸಿಹಿ

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಬಿಜೆಪಿ ಭರ್ಜರಿ ಜಯ ಗಳಿಸಿದ ಹಿನ್ನೆಲೆಯಲ್ಲಿ ಸೋಮವಾರ ಸಂಜೆ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ಥಳೀಯ ಶಾಸಕರೂ ಆಗಿರುವ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರು ಕ್ಷೇತ್ರದ ಕಾರ್ಯಕರ್ತರೊಂದಿಗೆ ಒಗ್ಗೂಡಿ ಜನರಿಗೆ ಸಿಹಿ ಹಂಚಿ ಸಂಭ್ರಮಾಚರಿಸಿದರು.





ಅರುಣ್ ಸೋಮಣ್ಣ ಸಿಹಿ ಹಂಚಿ ಸಂಭ್ರಮ

ಅಸ್ಸಾಂ, ಪಶ್ಚಿಮ ಬಂಗಾಳ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪಕ್ಷದ ಬೆಂ.ದಕ್ಷಿಣ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ.ಅರುಣ್ ಸೋಮಣ್ಣ ಅವರು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅಗ್ರಹಾರ ದಾಸರಹಳ್ಳಿ ವಾರ್ಡ್‌ನಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಿಹಿಹಂಚಿ ಸಂಭ್ರಮಿಸಿದರು.

ಸಿಎಂಗೆ ಸನ್ಮಾನ | ಭಾರತ ಹಲ ಜಾತಿ, ಧರ್ಮಗಳ ದೇಶ | ಮಾನವೀಯತೆಯೇ ನಿಜವಾದ ಧರ್ಮ: ಸಿಎಂ

ಹಜ್ ಯಾತ್ರೆಗೆ ಸಿದ್ದರಾಮಯ್ಯ ಚಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭಾರತದ ಸಂವಿಧಾನ ನಮ್ಮ ಧರ್ಮವನ್ನು ಪ್ರೀತಿಸು, ಇನ್ನೊಂದು ಧರ್ಮದ ಬಗ್ಗೆ ಸಂಹಿಷ್ಣುತೆ ಇರಬೇಕು ಎನ್ನುತ್ತದೆ. ಅನೇಕ ಜಾತಿ, ಧರ್ಮಗಳಿರುವ ದೇಶ ನಮ್ಮದು. ಇಲ್ಲಿ ಪರಸ್ಪರ ಸೌಹಾರ್ದತೆ, ಸಹಿಷ್ಣುತೆ ಬೆಳೆಸಿಕೊಂಡರೆ ಒಳ್ಳೆಯದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ಹೆಗಡೆ ನಗರ ಮುಖ್ಯ ರಸ್ತೆಯಲ್ಲಿರುವ ಹಜ್‌ಭವನದಲ್ಲಿ 'ಹಜ್ ಯಾತ್ರಿಕರ ವಿಮಾನ ಯಾನ' ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ಮುಸ್ಲಿಮನೂ ತನ್ನ ಜೀವನದಲ್ಲಿ ಒಮ್ಮೆಯಾದರೆ ಹಜ್ ಯಾತ್ರೆಗೆ ಹೋಗಲೇ ಬೇಕು. ಹಜ್ ಯಾತ್ರೆ ಇಸ್ಲಾಮಿನ ಐದು ಆಧಾರ ಸ್ತಂಭಗಳಲ್ಲಿ ಒಂದು. ಆರ್ಥಿಕವಾಗಿ ಸಬಲರಾಗಿರುವವರು, ಆರೋಗ್ಯವಾಗಿರುವವರು ಹಜ್ ಯಾತ್ರೆ ಮಾಡಬೇಕು. ಇದರಿಂದ ಅವರ ಪಾಪಗಳೆಲ್ಲ ಕ್ಷಮಿಸಲ್ಪಡುತ್ತವೆ ಎಂಬ ನಂಬಿಕೆ ಕುರಾನ್‌ನಲ್ಲಿ ಇದೆ. ಈ ಯಾತ್ರೆ ಮಾಡುವಾಗ ಪ್ರತಿಯೊಬ್ಬನೂ ನಿಷ್ಕಲ್ಮಶ ಶ್ರದ್ಧೆಯಿಂದ ಮಾಡಬೇಕು ಎಂದರು.

ಯಾವ ಧರ್ಮವೂ ಮತ್ತೊಬ್ಬರನ್ನು ದ್ವೇಷ ಮಾಡಿ ಎಂದು ಹೇಳುವುದಿಲ್ಲ. ಹಿಂದು, ಕ್ರೈಸ್ತ, ಇಸ್ಲಾಂ ಧರ್ಮವೂ ಇನ್ನೊಬ್ಬರನ್ನು ದ್ವೇಷಿಸಿ ಎಂದು ಹೇಳಿಲ್ಲ. ಮನುಷ್ಯರಾದ ನಾವು ದ್ವೇಷ ಬೆಳೆಸಿಕೊಂಡಿದ್ದೇವೆ. ಪ್ರತೀ ಧರ್ಮದಲ್ಲಿಯೂ ಮತ್ತೊಬ್ಬರನ್ನು ಪ್ರೀತಿಸು, ಇನ್ನೊಬ್ಬನನ್ನು ಕರುಣೆಯಿಂದ, ಭ್ರಾತೃತ್ವದಿಂದ ನೋಡು ಅನ್ನುತ್ತದೆ. ಮಾನವೀಯತೆಯೇ ನಿಜವಾದ ಧರ್ಮ. ಮನುಷ್ಯ, ಮನುಷ್ಯನನ್ನು ದ್ವೇಷಿಸಬಾರದು ಎಂದು ಹೇಳಿದರು.

ಮುಸ್ಲಿಂ ಸಮುದಾಯದ ಧರ್ಮ ಗುರುಗಳು, ಕಂದಾಯ ಸಚಿವ ಕೃಷ್ಣಬೈರೇಗೌಡ, ಪೌರಾಡಳಿತ ಸಚಿವ ರಹೀಂಖಾನ್, ವಿಧಾನ ಪರಿಷತ್ತು ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ವಿಧಾನಪರಿಷತ್ತಿನ ಸದಸ್ಯರಾದ ನಜೀರ್‌ಅಹ್ಮದ್, ಅಬ್ದುಲ್ ಜಬ್ಬಾರ್, ಶಾಸಕ ರಿಜ್ವಾನ್ ಅರ್ಷದ್, ಆಸೀಫ್ ಶೇಟ್, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಲ್ತಾಫ್ ಖಾನ್, ಹಜ್ ಸಮಿತಿಯ ಅಧ್ಯಕ್ಷ ಜುಲ್ಫಿಕರ್ ಆಲೀಖಾನ್ ಇತರರಿದ್ದರು.



ನಗರದ ಹೆಗಡೆ ನಗರ ಮುಖ್ಯರಸ್ತೆಯಲ್ಲಿರುವ ಹಜ್ ಭವನದಲ್ಲಿ ಹಜ್ ಯಾತ್ರಿಕರ ವಿಮಾನಯಾನ ಉಡಾವಣೆ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಹಜ್ ಸಮಿತಿಯ ಅಧ್ಯಕ್ಷ ಜುಲ್ಫಿಕರ್ ಆಲೀಖಾನ್ ಸೇರಿದಂತೆ ಇತರರಿದ್ದರು.

CHANGE OF NAME

I, MARNINI PEDDANNA Service No: 8036458N Rank:- HAV Current residing at Pioneer Corps Training Centre MS Nagar, Bengaluru -560033 have changed my son's name from SATAYALI ASWIT to MARNINI ASWITH vide affidavit dated 04/05/2026, sworn before Advocate and Notary Uday Kumar .K, Bangalore

CHANGE OF NAME

I, KRISHA G.AILDAS., aged about 32 years, (DOB 07-10-1993) Wife of Sri. Gautam S.Aildas, and D/O. Sri. Venod Makhija, and presently residing at No.23, Vyjayanthi Nivas, 1st Cross, CSI Compound, Wilson Garden, BANGALORE 560 027, declare that I have changed my name from "POOJA MAKHIJA" or "POOJA V.MAKHIJA" to "KRISHA G.AILDAS" vide affidavit dated 02.05.2026, Sworn before advocate and notary Ravikumar .V, Bangalore.

CHANGE OF NAME

I, VIKRAM, Aged about 41 Years, S/o Perumal No.55, Pillaganahalli, B.G.Road, VTC Bangalore South, PO Gottigere, Bangalore 560 083, have changed my name from PERUMAL to VIKRAM vide affidavit dated 04/05/2026, sworn before Advocate and Notary Devika Kumar .A, Reg. No. 12480 Bangalore

CHANGE OF NAME

I, (OLD NAME) PRATHIKA AB, Spouse of No.JC-313414K, SUB, SACHIN MU, residing at House #3708, 3rd Block, Trendz Whispering Woods Apartments, Bogadi, Mysore (Dist), Karnataka (State), PIN: 570026, Have Changed my name to (NEW NAME) PRATHIKA A B Vide Affidavit Dated 02.05.2026 Sworn Before Notary S.L BALAGURU BANGALORE

PUBLIC NOTICE

NOTICE is hereby given to the General Public that our client, **Mr.Ameen Sait S/o. Mr.Khaleel Sait** intends to purchase the property described in the schedule below from **Mr.Umar T.A S/o.Ahmed Ali.** Any person/s, Financial Institutions, Bank etc claiming any right, title, interest, lien, or objection of any nature over the said property is hereby called upon to file their claims in writing, supported by documentary proof, at the office of the undersigned within **10 days** of this publication. If no objections are received within the stipulated period, it shall be deemed that no such claims exist, and our client shall proceed to finalize the sale transaction, treating any subsequent claims as waived.

SCHEDULE PROPERTY

All that piece and parcel of the Residential Property bearing Eastern portion of **Site No.8,** Khata No.437, formed in property No.211/2, Situated at **Kacharakanahalli Village, kasaba Hobli, Bangalore North Taluk, Bangalore,** now comes under the jurisdiction of BBMP Ward No.24 having E-PID No. 1425537113, Measuring: East to West: **15 Feet,** North to South: **40 Feet,** Total Measuring **600 sq.ft** Bounded on the:
East by: Private Property, West by: Private Property, North by: Road, South by: Private Property.

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843, 080-48658774
E- Mail: rvlaw.76@gmail.com

ಕರ್ನಾಟಕ ಗೃಹ ಮಂಡಳಿ
ಸಹಾಯಕ ಕಾರ್ಯಪಾಲಕ ಅಭಿಯಂತರರವರು
ಸೂರ್ಯನಗರ 1 ಮತ್ತು 2ನೇ ಹಂತದ ಯೋಜನಾ ಕಛೇರಿ, ವಾಣಿಜ್ಯ ನಿವೇಶನ ಸಂಖ್ಯೆ. 01, 3ನೇ ಮಹಡಿ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಸೂರ್ಯನಗರ 1ನೇ ಹಂತ, ಬೆಂಗಳೂರು-81
ಸಂಖ್ಯೆ:ಕಗೃಮಂ/ಕಾಅ/ಸಕಾಅ/ಕಂಅ/ಸೂನ/ಬೆಂ/23/2026-27 ದಿನಾಂಕ: 10/04/2026

ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ಸೂರ್ಯನಗರ 2ನೇ ಹಂತದ ಬಡಾವಣೆಯಲ್ಲಿ **MIG, ವರ್ಗದ ನಿವೇಶನ ಸಂಖ್ಯೆ: 382 ಸೆಕ್ಟರ್ 'ಡಿ',** ಸ್ವತ್ತನ್ನು ವಿವೇಚನಾ ಕೋಟಾದಡಿಯಲ್ಲಿ **ಶ್ರೀ. ಎಂ. ವೀರಭದ್ರಯ್ಯ,** ಬಿನ್ ಲೇಟ್ ಮುದ್ದಯ್ಯ ಇವರಿಗೆ ದಿನಾಂಕ: 31/08/2012 ರಂದು ಹಂಚಿಕೆ ಮಾಡಲಾಗಿರುತ್ತದೆ. ಹಂಚಿಕೆದಾರರು ದಿನಾಂಕ: 04/04/2013 ರಂದು ಷರತ್ತಿನ ಕ್ರಯ ಪತ್ರ ನೊಂದಾವಣೆ ಮಾಡಿಕೊಂಡಿರುತ್ತಾರೆ, ಶ್ರೀ. ಎಂ. ವೀರಭದ್ರಯ್ಯ, ಬಿನ್ ಲೇಟ್ ಮುದ್ದಯ್ಯ ರವರು ದಿನಾಂಕ: 09/04/2021 ರಲ್ಲಿ ಮರಣ ಹೊಂದಿದ್ದು, ಮೃತರ ಮಗನಾದ **ಶ್ರೀ. ವಿ. ಮುತ್ತುರಾಜ್,** ಬಿನ್ ಲೇಟ್. ಎಂ. ವೀರಭದ್ರಯ್ಯ, ರವರು ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿ, ಸದರಿ ನಿವೇಶನದ ಹಂಚಿಕೆಯನ್ನು ಅವರ ಹೆಸರಿಗೆ ವರ್ಗಾವಣೆ ಮಾಡುವಂತೆ ಕೋರಿರುತ್ತಾರೆ. ನೀಡಿರುವ ದಾಖಲೆ ಅನ್ವಯ ನಿವೇಶನದ ಹಂಚಿಕೆಯನ್ನು ಶ್ರೀ. ವಿ. ಮುತ್ತುರಾಜ್, ಬಿನ್ ಲೇಟ್. ಎಂ. ವೀರಭದ್ರಯ್ಯ, ಅವರ ಹೆಸರಿಗೆ ವರ್ಗಾವಣೆ ಮಾಡಲು ಪರಿಗಣಿಸಿ ಈ ಪ್ರಕಟಣೆ ಹೊರಡಿಸಿದ್ದು, ಈ ಪ್ರಕಟಣೆ ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ **15 ದಿನಗಳೊಳಗಾಗಿ** ಈ ಬಗ್ಗೆ ಸಂಬಂಧಿಸಿದವರಿಂದ ಯಾವುದೇ ತಕರಾರು ಆಕ್ಷೇಪಣೆ ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಸೂರ್ಯನಗರ 1 & 2ನೇ ಹಂತದ ಯೋಜನಾ ಕಛೇರಿ, ವಾಣಿಜ್ಯ ನಿವೇಶನ ಸಂಖ್ಯೆ: 01, 3ನೇ ಮಹಡಿ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಸೂರ್ಯನಗರ 1ನೇ ಹಂತ, ಬೆಂಗಳೂರು-560081, ಇಲ್ಲಿ ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಮೇಲಿನ ನಿವೇಶನವನ್ನು ಮೃತರ ಮಗನಾದ ಶ್ರೀ. ವಿ. ಮುತ್ತುರಾಜ್, ಬಿನ್ ಲೇಟ್. ಎಂ. ವೀರಭದ್ರಯ್ಯ, ಇವರಿಗೆ ವರ್ಗಾವಣೆ ಮಾಡಿಕೊಡಲಾಗುವುದೆಂದು ಹಾಗೂ ನಂತರ ಬರುವ ಯಾವುದೇ ತಕರಾರು/ ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಗೃಹ ಮಂಡಳಿ
ಸೂರ್ಯನಗರ ಸಮನ್ವಯ ಘಟಕ, ಬೆಂಗಳೂರು.

ಹೆತ್ತವರ ಪತ್ತೆಗೆ ಜರ್ಮನಿ ಮಹಿಳೆ ಕಾನೂನು ಸಮರ

ಮಾಹಿತಿ ಕೊಡದ ಆಸ್ಪತ್ರೆಯ ವಿರುದ್ಧ ಕೋರ್ಟ್‌ಗೆ



• ಕನ್ನಡಪ್ರಭ ವಾರ್ತೆ
ಬೆಂಗಳೂರು

ತನ್ನ ಹೆತ್ತವರ ಬಗ್ಗೆ ಮಾಹಿತಿ ನೀಡಲು ನಗರದ ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ನಿರ್ದೇಶನ ನೀಡಬೇಕೆಂದು ಕೋರಿ ಜರ್ಮನಿಯ ಮಹಿಳೆಯೊಬ್ಬರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಪಶ್ಚಿಮ ಜರ್ಮನಿಯ ವೈಸ್‌ಬೇಡನ್ ನಿವಾಸಿ ಅನಿತಾ ವೈಸೆಂಟ್ (48) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಕರಣ ಹಿನ್ನೆಲೆ: ತಾನು ಭಾರತದಲ್ಲಿ ಜನಿಸಿದ್ದು, ಜರ್ಮನ್ ದಂಪತಿ ದತ್ತು ಸ್ವೀಕರಿಸಿದ್ದರು. ಈ ಸಂಬಂಧ ನಾನು ಹಲವು ಬಾರಿ ಭಾರತಕ್ಕೆ ಬಂದು ಆಸ್ಪತ್ರೆಯಿಂದ ಮಾಹಿತಿ ಕೋರಿದರೂ ಪ್ರಯೋಜನವಾಗಿಲ್ಲ. ಜೀವನ ಪೂರ್ತಿ ಗುರುತು ಪತ್ತೆಯಲ್ಲೇ ಸಾಕಷ್ಟು ಸಮಯ ವ್ಯಯಿಸುವಂತಾಗಿದೆ. ಅದ್ದರಿಂದ, ನನ್ನ ಹೆತ್ತವರನ್ನು ಪತ್ತೆ ಮಾಡಲು ಆಸ್ಪತ್ರೆಯವರಿಗೆ ನಿರ್ದೇಶಿಸಬೇಕೆಂದು ಮಹಿಳೆ ಕೋರಿದ್ದಾರೆ. ಅನಿತಾರನ್ನು ಜರ್ಮನಿ ದಂಪತಿ ಲುಟ್ಜ್ ಜೋಸೆಫ್ ವೈಸೆಂಟ್ ಮತ್ತು ಸಿಗ್ರಿಡ್ ವೈಸೆಂಟ್ 1978ರಲ್ಲಿ ಆಸ್ಪತ್ರೆ ಯಿಂದ ದತ್ತು ಪಡೆದಿದ್ದರು. ಬೆಂಗಳೂರಿನ ಸೆಷನ್ಸ್ ನ್ಯಾಯಾಲಯ 1978ರ ಆ.9ರಂದು ಈ ದಂಪತಿಗೆ, ಅನಿತಾ ಅವರ ಪೋಷಕತ್ವ ಒದಗಿಸಿತ್ತು. ದಾಖಲೆ ಪ್ರಕಾರ 1978ರ ಮಾ.3 ರಂದು ನಾನು ಜನಿಸಿದ್ದೇನೆ. ತನ್ನ ಹೆತ್ತ ತಾಯಿ 1978ರ ಮಾ.26 ರಂದು ಆರೋಗ್ಯ ಸಮಸ್ಯೆಯಿಂದ ಸಾವನ್ನಪ್ಪಿದ್ದಾರೆ. ಮಗುವನ್ನು ಬೆಳೆಸಲು ಕಷ್ಟ ವಾಗುತ್ತದೆ ಎಂದು ನನ್ನ ತಂದೆ ನನ್ನನ್ನು ಆಸ್ಪತ್ರೆಯ ಸುಪರ್ದಿಗೆ ನೀಡಿದ್ದರು ಎಂದು ದಾಖಲೆಗಳು ವಿವರಿಸುತ್ತವೆ. ಆದರೆ, ತಂದೆ-ತಾಯಿ ಬಗ್ಗೆ ಉಲ್ಲೇಖ ವಿಲ್ಲ ಎಂದು ಅನಿತಾ ವಿವರಿಸಿದ್ದಾರೆ. ಮಗುವನ್ನು ನೀಡು ವುದಕ್ಕೆ ಸಂಬಂಧಿಸಿದ ಪತ್ರ, ಪೋಷಕರ ಒಪ್ಪಿಗೆ, ವೈದ್ಯಕೀಯ ದಾಖಲೆ ಗಳನ್ನು ಬಹಿರಂಗಪಡಿಸಿಲ್ಲ, ಸಂಬಂಧಿತರ ದಾಖಲೆಗಳನ್ನು ಕಾಪಿಡಲು ವಿಫಲವಾಗಿದ್ದಾರೆ. ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ-1956ರ ನಿಬಂಧನೆ ಗಳನ್ನು ಉಲ್ಲಂಘಿಸಿರುವ ಸಾಧ್ಯತೆ ಇದೆ ಎಂದು ದೂರಲಾಗಿದೆ. ಈ ಮಧ್ಯೆ, ಅನಿತಾ ಅವರ ಹೆತ್ತವರಿಗೆ ಸಂಬಂಧಿಸಿದಂತೆ ದಾಖಲೆ ಲಭ್ಯವಾಗಿಲ್ಲ, ಹೀಗಾಗಿ, ಯಾವುದೇ ಮಾಹಿತಿ ಲಭ್ಯವಿಲ್ಲ ಎಂದು ಹಲಸೂರು ಗೇಟ್ ಠಾಣೆಯ ಪೊಲೀಸರು ತಿಳಿಸಿ ನಡೆಸಿ ಆಸ್ಪತ್ರೆಯ ಆಡಳಿತ ಮಂಡಳಿಗೆ ಮಾಹಿತಿ ನೀಡಿದ್ದಾರೆ ಎಂಬ ಅಂಶ ವನ್ನು ಸರ್ಕಾರದ ಪರ ವಕೀಲರು ನ್ಯಾಯ ಪೀಠದ ಗಮನಕ್ಕೆ ತಂದಿದ್ದಾರೆ.

CHANGE OF NAME

I, Sri Chethan .L, S/o. Lakshmikanth T.N, aged about 26 years, Presently R/at. Ground Floor, Varthur Main Road, Yellamma Compound, Siddapura, Bangalore-560066, do hereby declare that I have changed my name from Chethan to Chethan .L, vide affidavit dated 04.05.2026, sworn to before S.R. Paramashivaiah, Advocate & Notary Public, Govt. of India, Bengaluru.

CHANGE OF NAME

I, NAVEEN SAJJAN, resident of Kottureshwara Nilaya, Behind Old Petrol Bunk, Vedavati Nagara Hiriyur, Chitradurga, Karnataka-577598, Presently Camp at : Bangalore, Karnataka, do hereby declare that NAVEEN SIDDARAMANNA and NAVEEN SAJJAN refer to the same person i.e. me, and Now I have changed my name from NAVEEN SIDDARAMANNA to NAVEEN SAJJAN and my father's name from SIDDARAMANNA to A V SIDDARAMANNA and my Mother's name from VISHALA Y S to VISHALA Y S, vide affidavit dated 02.05.2026, sworn to before H.S. Dharma Prasad, Advocate & Notary Public, Govt. of India, Bengaluru.

CHANGE OF NAME

WE, SHIVA KUMAR VENKATESH AND SOWMYA SHIVA KUMAR, Residing at : No.17, Shanti Layout Main Road, Akshay Nagar, 2nd Block, Ramamurthy Nagar, Bangalore-560016, have changed our minor daughter's name from SARAH SHIVA KUMAR to SAHASRA SHIVA KUMAR, vide affidavit dated 17/3/2026 sworn to before Nijagunaradhya T C Advocate and Notary Bangalore.

CHANGE OF NAME

I, Goutham Chand S/o Kapoor Chand Jain aged about 65 years R/at No.16/1, 6th Cross Road, Sriramapura, Bangalore 560021 would like to state that my name mentioned in Aadhaar & Pan Card as GOUTHAM CHAND. As per ICICI Share Certificate as K. GOUTHAM CHAND JAIN.
GOUTHAM CHAND and K. GOUTHAM CHAND JAIN are one and the same person. Sworn Before Advocate & Notary Onkarappa N.R. vide affidavit dtd.07.04.2026

IN THE COURT OF IX ADDL CITY CIVIL & SESSION JUDGE AT BANGALORE
P & S.C 196/2026 (CCH-5)

BETWEEN: 1. MAMATHA J, W/o Late K S Mallikarjun, Aged about 55 years, R/at No.414, 2nd Floor, 4th Block, Janapriya Heights, Mallasandra, Bangalore-560057. **2. SUMA. M KORI,** D/o Late K S Mallikarjun, Aged about 31 years, R/at No.757, 4th Main, Kirloskar Layout, Saptagiri College of Engineering, Sidedahalli, Nagasandra, Bangalore-560073. **3. YASHASWINI M KORI,** D/o Late KS Mallikarjun, Aged about 21 years, R/at No.3, 1st Main, 1st Cross, NMH Global School, Siddeshwara Layout, Sidedahalli, Nagasandra Post, Bangalore-560073. **... PETITIONERS**
AND: NIL ...RESPONDENT

PUBLIC NOTICE

Whereas the above named petitioners has made a petition to this Hon'ble Court (CCH-05) under Section 372 of Indian Succession Act for the grant of SUCCESSION CERTIFICATE in favour of petitioners, in respect of the schedule mentioned below. The below mentioned schedule has held by Late K.S.Mallikarjun Husband of petitioner No.1 & father of Petitioner NO.2 &3 herein who expired on 24/03/2024.
Interested parties are hereby called upon to appear before this Hon'ble Court in person or by a pleader duly instructed on the **25-06-2026** at 11:00 A.M in forenoon to show cause against the petition, failing which wherein the matter will be heard and determined.

SCHEDULE

1. Current account in STATE BANK OF INDIA, A/c No. 54008700571 Branch, 120, 100 ft Road, Industrial Estate, III phase Peenya, Bangalore-560058.
2. GST Registration and all associated inputs, \ Tax Credit, held under GSTIN29ABBPM2809HIZP OF DECEASED K.S.MALLIKARJUN.

Given under my hand and seal of the court on 24-04-2026.
By order of the court, Senior Sheristedar, City Civil Court, Bangalore.

RAVINDRA.B.S. Advocate
No 04, 4th Floor, Grand Majestic Mall, Gandhinagar, Majestic, Bangalore-560009.

IN THE COURT OF THE HON'BLE X ADDITIONAL CITY CIVIL AND SESSIONS JUDGE AT BANGALORE (CCH-11)
P & S.C. No. 695/2025

PETITIONER : Mrs. Girijamma, Aged about 83 years, W/o. late Mr. D.S. Venkatesha Murthy, No. 1770, 6th Main, D Block, Behind Varalakshmi Nursing Home, Rajajinagar II Stage, Bangalore -560 010
RESPONDENT : Mr. Akshay Suresh, Aged about 28 years, S/o. late Mr. Suresh D.V. Murthy, Flat No. A002, Adarsha Hill Apartments, Kumaraswamy Layout, Bengaluru -560 078.

NOTICE TO THE RESPONDENT

To, Mr. Akshay Suresh, Aged about 28 years, S/o. late Mr. Suresh D.V. Murthy, Flat No. A002, Adarsha Hill Apartments, Kumaraswamy Layout, Bengaluru 560 078
Whereas the above named has made Petition to this Court under section 372 of Indian Succession Act for the grant of Succession Certificate in favour of the Petitioner, in respect of the schedule mentioned below. The below mentioned Schedule Property has held by Late Mr. Suresh D.V. Murthy, son of the Petitioner and father of respondent herein who expired on 01/02/2022. You are hereby Noticed to appear in this Court on **29/6/26 at 11:00 A.M.** in person or through advocate/ pleader to answer the questions to the same. Failing which the Petition will be heard and determined as ex-parte.

SCHEDULE
(Debt and Security)

TDR No. 463244 in the name of Mr. Suresh D.V. Murthy with due date of 31/03/2022 and the maturity amount being Rs.51,31,551/- together with interest from 01/04/2022 till payment, kept with:
Union Bank of India, Rajajinagar Main, 1st Main, 'E' Block, 2nd Stage, Rajajinagar, Bengaluru -560 010.
Given under my hand & seal of the Court, this 24th day of April 2026.

By Order of the Court
Sd/- Senior Sheristedar
City Civil Court, Bengaluru

Address for Service
Mr. B.N. Tulsi Kumar, Advocate,
Office at No.1020 (New No.18/1) 11th Main Road, Hampinagar, Bengaluru -560104. Mob : 9845811922
Mail ID: bn.tulsikumar@gmail.com

CHANGE OF NAME

I, D V GOPALA REDDY, S/o Late Verabhadrayya, age 81 years, R/at No. 168, Near Masjid, Dommasandra, Sarjapura Hobli, Anekal Taluk, Bangalore-562 125 do hereby declare that both the names i.e. D V GOPALA REDDY and D V GOPAL REDDY are one and the same and refers to me only, henceforth I shall be known and called as D V GOPALA REDDY for all purposes, vide affidavit dated 30-04-2026, sworn before Advocate and Notary ROOPA G BHANDARE at Bangalore.

CHANGE OF NAME

I, Mr. MOHAMMAD RIZWAN M, S/o Mohammad Babu, R/at #10, Maruthi cross, Near Post Office, Ramamurthy Nagar, VTC, Bangalore North, PO: Dooravani Nagar, Bangalore-560016 do hereby declare that both the names i.e. MOHAMMAD RIZWAN M and MOHAMMAD RIZWAN are one and the same and refers to me only, vide affidavit dated 04-05-2026, sworn before Advocate and Notary K.R. PADMANABHAIAH at Bangalore

CHANGE OF NAME

I, K.K. SHASHIDHAR, S/o Krishnegowda, age 59 years, presently R/at No. 113, D-Block, Parasmane Apartment, kengeri Satellite Town, Bengaluru South, Bengaluru-560 060 do hereby declare that my correct name is K. K. SHASHIDHAR, but in my passport by mistake my name is mentioned as SHASHIDHARA instead of my correct name K. K. SHASHIDHAR, henceforth I shall be known and called as K. K. SHASHIDHAR for all purposes, vide affidavit dated 30th April 2026, sworn before Advocate and Notary G.R. RAJANNA at Bangalore.

IN THE COURT OF THE HON'BLE IIIrd ADDITIONAL PRINCIPAL JUDE AT FAMILY COURT, BANGALORE
G&W.C.NO.299/2025

BETWEEN:
Mr.ABHIJITH N.R S/o N.C Raghuram Aged about 38 years, R/at. No 49/1, S.Kariyappa Road Basavanagudi, Bangalore-560004 **...PETITIONER**
AND:
Mrs. APARNA BHAT W/O Hitesh B.E, Aged about 37 years, R/at. No.91, Sai Krupa, 3rd Main Road, Sarvabhouma Nagar, Chikkalsandra, Bangalore-560061 **...RESPONDENT**

NOTICE TO THE RESPONDENT

Mrs.APARNA BHAT, W/o Hitesh B.E, Aged about 37 years, R/at. No.91, Sai Krupa, 3rd Main Road, Sarvabhouma Nagar, Chikkalsandra, Bangalore-560061
Whereasthe Petitioner herein has filed the above Petition for the Custody of the child and other reliefs against the respondent your are hereby summoned to appear before this Hon'ble Court in person or by a duly authorized pleader on 18.06.2026 at 11 am to answer the same failing which the above Petition will be disposed of exparte.
Given under my hand and seal of the Court on this 26th day of March, 2026

BY ORDER OF THE COURT : Senior Sheristedar
Family Court, Bengaluru
ADVOCATE FOR PETITIONER : Smt. Bhushani Kumar, Advocate, No.55/5, 1st Floor, SV Complex, K.R. Road, Basavanagudi, Bangalore-04.

CHANGE OF NAME

I, SHUBHANKAR BAG, S/o Billa Mangal Bag, R/o D-304, Ittina Mahaveer, Neeladri Nagar, Electronic City Phase-1, bangalore-560100 do hereby declare that I have changed my name from SUBHANKAR BAG to SHUBHANKAR BAG, henceforth I shall be known and called as **SHUBHANKAR BAG** for all purposes, vide affidavit dated 02-05-2026, sworn before Advocate and Notary **KISHWAR HUSSAIN .M.S** at Bangalore.

CHANGE OF NAME

I, SUSHMITHA G J, W/o Rakesh B N, D/o Javaregowda .K, age 27 years, R/o No. 17, 2nd Main road, 23rd Cross, Manjunathanagar, Ittamadu, BSK III Stage, Bengaluru South, Hosakerehalli, Bengaluru-560 085 do hereby declare that I have changed my name from **SUSHMITHA G J** to **SUSHMITHA RAKESH,** henceforth I shall be known and called as **SUSHMITHA RAKESH** for all purposes, vide affidavit dated 4th May 2026, sworn before Advocate and Notary **PUTTARAMAIAH** at Bangalore.

ಫಾರ್ಮ್ ಸಂಖ್ಯೆ. INC-26

[ಕಂಪನಿಗಳ (ಸ್ಥಾಪನೆ) ನಿಯಮಗಳು, 2014 ರ ನಿಯಮ 30 ಅನುಸಾರ]
ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಂಪನಿಯ ನೋಂದಾಯಿತ ಕಚೇರಿಯನ್ನು ಬದಲಾಯಿಸುವ ಕುರಿತು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು
ಕೇಂದ್ರ ಸರ್ಕಾರದ ಮುಂದೆ
ಪಶ್ಚಿಮ ಪ್ರದೇಶ
ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 13 ರ ಉಪವಿಭಾಗ (4) ಮತ್ತು ಕಂಪನಿಗಳ (ಸ್ಥಾಪನೆ) ನಿಯಮಗಳು, 2014 ರ ನಿಯಮ 30 ರ ಉಪವಿಭಾಗ (5) ರ ವಿಧಿ (a) ಸಂಬಂಧಿಸಿದಂತೆ
ಮತ್ತು
ಕ್ರಿಸ್ಟಲ್ ಗ್ರಾನೈಟ್ & ಮಾರ್ಬಲ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ವಿಷಯದಲ್ಲಿ, ಇದರ ನೋಂದಾಯಿತ ಕಚೇರಿ: 41 ಕಿಮೀ, ಬೆಂಗಳೂರು - ಮೈಸೂರು ರಸ್ತೆ, ಮದಾಪುರ ಗ್ರಾಮ, ರಾಮನಗರ, ಕರ್ನಾಟಕ, ಭಾರತ, 571511

ಸಾಮಾನ್ಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತದೆ: ಕಂಪನಿಯು ಕಂಪನಿಗಳ ಅಧಿನಿಯಮ, 2013 ರ ಸೆಕ್ಷನ್ 13 ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ. 10ನೇ ಮಾರ್ಚ್ 2026 ರಂದು ಮಂಗಳವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾದ ವಿಶೇಷ ನಿರ್ಣಯದ ಪ್ರಕಾರ, ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಶನ್‌ನಲ್ಲಿ ತಿದ್ದುಪಡಿ ಮಾಡಿ, ಕಂಪನಿಯ ನೋಂದಾಯಿತ ಕಚೇರಿಯನ್ನು ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ರಾಜ್ಯಕ್ಕೆ ಬದಲಾಯಿಸಲು ಅನುಮತಿ ಪಡೆಯಲು ಈ ಅರ್ಜಿ ಸಲ್ಲಿಸಲಾಗುತ್ತಿದೆ.
ಈ ಬದಲಾವಣೆಯಿಂದ ಯಾವುದೇ ವ್ಯಕ್ತಿಯ ಹಿತಾಸಕ್ತಿ ಪ್ರಭಾವಿತರಾಗುವ ಸಾಧ್ಯತೆ ಇದ್ದಲ್ಲಿ, ಅವರು ತಮ್ಮ ಆಕ್ಷೇಪಣೆಗಳನ್ನು, ತಮ್ಮ ಹಿತಾಸಕ್ತಿಯ ಸ್ವರೂಪ ಮತ್ತು ವಿರೋಧದ ಆಧಾರಗಳನ್ನು ವಿವರಿಸುವ ಪ್ರಮಾಣಪತ್ರ (ಅಫಿಡವಿಟ್) ಸಮೇತ, ಈ ಪ್ರಕಟಣೆಯ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗಾಗಿ ಕೆಳಗಿನ ವಿಳಾಸಕ್ಕೆ, ನೋಂದಾಯಿತ ಅಂಚೆ ಮೂಲಕ ಅಥವಾ ಸ್ವತಃ ಸಲ್ಲಿಸಬಹುದು: ಪ್ರಾದೇಶಿಕ ನಿರ್ದೇಶಕರು, ಪಶ್ಚಿಮ ಪ್ರದೇಶ, "ಎವರೆಸ್ಟ್", 5ನೇ ಮಹಡಿ, 100 ಮೆರೈನ್ ಡ್ರೈವ್, ಮುಂಬೈ - 400002, ಮಹಾರಾಷ್ಟ್ರ, ಇದರ ಪ್ರತಿಯನ್ನು ಅರ್ಜಿ ಸಲ್ಲಿಸುವ ಕಂಪನಿಯ ನೋಂದಾಯಿತ ಕಚೇರಿಗೂ ಕಳುಹಿಸಬೇಕು:
41 ಕಿಮೀ, ಬೆಂಗಳೂರು - ಮೈಸೂರು ರಸ್ತೆ, ಮದಾಪುರ ಗ್ರಾಮ, ರಾಮನಗರ, ಕರ್ನಾಟಕ, ಭಾರತ, 571511

ಪರವಾಗಿ ಮತ್ತು ಪರವಾಗಿ
ಕ್ರಿಸ್ಟಲ್ ಗ್ರಾನೈಟ್ & ಮಾರ್ಬಲ್ ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ ಮಾಡಿದೆ
ನಾರಾಯಣ ಪ್ರಸಾದ್ ಗೋವಿಂದ್ ಬಜಾಜ್
ನಿರ್ದೇಶಕ (DIN: 00718905)
ದಿನಾಂಕ: 05.05.2026
ಸ್ಥಳ: ಬೆಂಗಳೂರು

IN THE COURT OF CIVIL JUDGE (S.D) THANE CIVIL M.A. NO. 13 OF 2026

Smt. Annalakshmy, W/o K. L. Hariharan, Age 60 Years, OCC. Housewife, Presently R/AT Row House No. 20, Gunjan CHS, Lokpuram Gate No. 1, Pokhran Road No.1, Thane (W). ...Applicant V/s
1. **Lakshman Hariharan,** Age 33 Occ. Service, Presently R/AT Row House No. 20, Gunjan CHS, Lokpuram Gate No. 1, Pokhran Road No.1, Thane (W)
